

# ಸಿಹಿ ಕಹಿ

SK NEWS ಕನ್ನಡ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 07 | Issue : 213 | Friday 02-05-2025 | E-mail : maruti.b.hosamani76@gmail.com | Page: 4 | Price : Rs. 1/-


## ಸಮಾನತೆ ಹರಿಕಾರ, ಮಹಾ ಮಾನವತಾವಾದಿ ಬಸವಣ್ಣ ನವರ ಹಾಗೂ ಡಾ, ಬಿ.ಆರ್ ಅಂಬೇಡ್ಕರ್ ಜಯಂತಿ ಆಚರಣೆ



**ಸಿಹಿ ಕಹಿ ಸುದ್ದಿ,**

**ಹೊಸಪೇಟೆ :** ಈ ಸಂದರ್ಭದಲ್ಲಿ ವಸತಿ ನಿಲಯ ಪಾಲಕರದ ಕೊಟ್ರೇಶ್ ಸರ್ ಅವರ ಮಾತನುಡುತ್ತ ಬಸವಣ್ಣ ಅವರು ಜನಿಸಿದ್ದು ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿಯಲ್ಲಿ ತಂದೆ, ಮಾದರಸ, ತಾಯಿ,ಮಾದಲಂಬಿಕೆ ಭಾರತದ 12 ನೇ.ಶತಮಾನದ ಕನ್ನಡದ ಒಬ್ಬ ತತ್ವಜ್ಞಾನಿ, ಕಲಚೂರಿ ಅರಸನ ಬಿಜ್ಜಳ ಆಸ್ಥಾನದಲ್ಲಿ ಮಂತ್ರಿಯಾಗಿದ್ದರು ಮತ್ತು ಸಾಮಾಜಿಕ ಸುಧಾರಕರಾಗಿದ್ದರು. ಶಿವ ಕೇಂದ್ರೀಕೃತ ಭಕ್ತಿ ಚಳುವಳಿಯಲ್ಲಿ ಕನ್ನಡ ಕವಿಯಾಗಿದ್ದರು. ಬಸವಣ್ಣ ಅವರು ವಚನಗಳ ಮೂಲಕ ಸಾಮಾಜಿಕ ಅರಿವು ಮೂಡಿಸಿದರು. ಮತ್ತು ಲಿಂಗ ತಾರತಮ್ಯ, ಸಾಮಾಜಿಕ ತಾರತಮ್ಯ, ಮೂಢ ನಂಬಿಕೆಗಳನ್ನು ನಿರಾಕರಿಸಿದರು, ಬಸವಣ್ಣನ ಅವರು ಅನುಭವ ಮಂಟಪ ಅಥವಾ, "ಆಧ್ಯಾತ್ಮಿಕ ಅನುಭವದ ಭವನ ಸ್ಥಾಪನೆ ಮಾಡಿದರು ಎಂದೂ ಹೇಳಿದರು. ಅದೇ ರೀತಿ ಖಈಖ ನ ಜಿಲ್ಲಾ ಕಾರ್ಯದರ್ಶಿ ಶಿವರೆಡ್ಡಿ ಮಾತನಾಡಿ ಬಸವಣ್ಣನವರು 12 ನೇ. ಶತಮಾನದ ಮಹತ್ವದ ಸಮಾಜ ಸುಧಾರಕರು, ಅಂದು ಈ ಸಮಾಜವನ್ನ ಕಾಡುತ್ತಿದ್ದ ಅನಿಷ್ಟ ಜಾತಿ ವ್ಯವಸ್ಥೆ ಮತ್ತು ಶೋಷಣೆಯ ವಿರುದ್ಧ ಬಂಡಾಯವೆದ್ದು, ವೈದಿಕ ಶಾಹಿ ವ್ಯವಸ್ಥಯ ವಿರುದ್ಧ ಸಮರ ಸಾರಿದರು. ಅನುಭವ ಮಂಟಪ ಸ್ಥಾಪಿಸಿ ಅಲ್ಲಿ ಎಲ್ಲರಿಗೂ ಸಮಾನ ಅವಕಾಶ ನೀಡಿದರು. ಪುರುಷ ಮತ್ತು ಮಹಿಳೆಯರ ನಡುವೆ ಯಾವುದೇ ರೀತಿಯ ತಾರತಮ್ಯ ಇರಬಾರದೆಂದು ಪ್ರತಿಪಾದಿಸಿದು. ಮನುಷ್ಯನ ಬದುಕನ್ನು ಉತ್ತಮ ಗೊಳಿಸಲು ಇವರು ರಚಿಸಿದ ವಚನಗಳು ಇಂದಿಗೂ ನಮ್ಮೆಲ್ಲರಿಗೂ ಮಾರ್ಗದರ್ಶಕ. ಬಸವಣ್ಣ ನುಡಿದಂತೆ ನಡೆದರು, ಕಾಯಕವೇಕೈಲಾಸವೆಂದರು. ಇಂದಿನಸಂದರ್ಭದಲ್ಲಿ ಬಸವಣ್ಣನವರಿಗೆ ಗೌರವ ಸಲ್ಲಿಸುವುದೆಂದರೆ ಅವರ ಆದರ್ಶಗಳನ್ನು, ತತ್ವಗಳನ್ನು ಸರಿಯಾಗಿ ಅಧ್ಯಯನ ಮಾಡಿ ಅರ್ಥ ಮಾಡಿಕೊಳ್ಳುವುದು ಮತ್ತು ನಾವುಗಳು ನಮ್ಮ ಬದುಕಿನಲ್ಲಿ ಅವುಗಳನ್ನು ಅಳವಡಿಸಿ ಕೊಳ್ಳುವುದೆ ಬಸವಣ್ಣನವರ ಜಯಂತಿ ಎಂದು ಹೇಳಿದರು.

ಇದೆ ಸಂದರ್ಭದಲ್ಲಿ ವಸತಿ ನಿಲಯದ ಸಿಬ್ಬಂದಿಗಳಾದ ಚಂದ್ರಪ್ಪ, ಮಮತಾ, ಮಂಗಳಮ್ಮ, ಶೋಭಾ, ಹಾಗೂ ನಿಲಯದ ವಿದ್ಯಾರ್ಥಿಗಳಾದ, ಪವನ್, ವಿಜಯ, ನವೀನ್, ಕಿರಣ್ ಹಾಗೂ ಇತರೆ ವಿದ್ಯಾರ್ಥಿಗಳು ಭಾಗವಹಿಸಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮಾಲತೇಶ್.ಶೆಟ್ಟರ್.ಹೊಸಪೇಟೆ**

## ಬಸವಣ್ಣ ನವರ ತತ್ವ ಆಚರಣೆಗಳು ಸಮಾಜಕ್ಕೆಆದರ್ಶವಾಗಿವೆ: ಪ್ರಾಚಾರ್ಯರು ಸಿ.ಬಿ ಪೊಲೀಸ್ ಪಾಟೀಲ್

**ಸಿಹಿ ಕಹಿ ಸುದ್ದಿ,**

**ರೋಣ :** ಕರ್ನಾಟಕ ಪ್ರತಿಯೊಬ್ಬರು ಈ ಹಬ್ಬವನ್ನು ರಾಜ್ಯದಲ್ಲಿ ಆಚರಿಸುತ್ತಾರೆ ಮತ್ತು ತತ್ವಜ್ಞಾನಿ ಮತ್ತು ಕವಿ ಬಸವೇಶ್ವರ ಅವರ ಜನ್ಮದಿನವನ್ನು ಸೂಚಿಸುತ್ತದೆ. ಪ್ರಸಿದ್ದ ಸಂತ ಕ್ರಿ.ಶ 1105 ರಲ್ಲಿ ರಾಜ್ಯದ ಉತ್ತರ ಭಾಗಗಳಲ್ಲಿ ಶಿವ ಭಕ್ತರ ಕುಟುಂಬದಲ್ಲಿ ಜನಿಸಿದರು.

ಇವರು ಮಾನವ ಸಮಾನತೆಯನ್ನು ನಂಬಿದ್ದರು. ಮತ್ತು ಅವರ ಪಾತ್ರ ವರ್ಗವನ್ನು ಲೆಕ್ಕಿಸದೆ ಪ್ರತಿಯೊಬ್ಬರನ್ನು ಹೇಗೆ ಸಮಾನವಾಗಿ ಪರಿಗಣಿಸಬೇಕು ಎಂಬುದರ ಬಗ್ಗೆ ಅರಿತರು.

ಶಿವನನ್ನು ಸಂಕೇತಿಸುವ ಮತ್ತು ಎಲ್ಲಾ ಲಿಂಗಾಯತರು ಧರಿಸಿರುವ ಇಷ್ಟಲಿಂಗ ಹಾರವನ್ನು ಧರಿಸುವ ಅಭ್ಯಾಸವನ್ನು ಇವರು ಪರಿಚಯಿಸಿದರು.



ನಂತರ ಇವರು ತಮ್ಮ ಸಾಮ್ರಾಜ್ಯದ ಮುಖ್ಯ ಮಂತ್ರಿಯಾದರು ಮತ್ತು ಹಲವಾರು ಸಾಮಾಜಿಕ ಸುಧಾರಣೆಗಳನ್ನು ತಂದರು, ಪುರುಷರು ಮತ್ತು ಮಹಿಳೆಯರನ್ನು ಲಿಂಗ ಮತ್ತು ವರ್ಗ ತಾರತಮ್ಯದಿಂದ ಮುಕ್ತ ಗೊಳಿಸಿದರು ಎಂದು ಪ್ರಾಚಾರ್ಯರಾದ ಪೊಲೀಸ್ ಪಾಟೀಲ್ ಮಾತನಾಡಿದರು.

ರೋಣ ತಾಲೂಕಿನ ಪ್ರಸಿದ್ಧ ಕೆ.ಎಸ್.ಎಸ್ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಹಾಗೂ ಶ್ರೀ ಶರಣಬಸವೇಶ್ವರ ಪದವಿ ಪೂರ್ವ ಹಾಗೂ ಎನ್.ಎಸ್.ಎಸ್ ಘಟಕದ ಅಡಿಯಲ್ಲಿ ಶ್ರೀ ಬಸವೇಶ್ವರ ಜಯಂತಿಯೋತ್ಸವವನ್ನು ಅದ್ದೂ-ರಿಯಾಗಿ ಆಚರಿಸಲಾಯಿತು. ಪ್ರಾರಂಭದಲ್ಲಿ ಬಸವೇಶ್ವರ ಭಾವ ಚಿತ್ರಕ್ಕೆ ಸಂಪ್ರದಾಯ ಬದ್ಧವಾಗಿ ಪೂಜಾ ಕಾರ್ಯಕ್ರಮವನ್ನು ನೆರವೇರಿಸಲಾಯಿತು.

ಈ ಸಮಯದಲ್ಲಿ ವೇದಿಕೆ ಮೇಲೆ ಸ್ಥಾನಿಕ ಮುಖ್ಯಸ್ಥರಾದ ಆಯ್.ಬಿ ದಂಡಿನ ಹಾಗೂ ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯರಾದ ಶ್ರೀಮತಿ ಎ.ಎಚ್ ನಾಯ್ಕರ್, ಪದವಿ ಹಾಗೂ ಪದವಿ ಪೂರ್ವ ಮಹಾವಿದ್ಯಾಲಯದ ಉಪನ್ಯಾಸಕರು ಹಾಗೂ ಸಿಬ್ಬಂದಿ ಬೋಧಕೇತರ ಪ್ರೌಢ ಶಾಲೆಯ ವರ್ಗದವರು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎಸ್.ವಿ ಸಂಕನಗೌಡ್ರ.ರೋಣ. ಗದಗ**

## ಕರೆಂಟ್ ಶಾಕ್ ಹೊಡೆದು ಕಂಬದಲ್ಲೇ ನೇತಾಡಿದ ಲೈನ್ ಮ್ಯಾನ್: ಕಾರಣ ಏನು.....?

**ಸಿಹಿ ಕಹಿ ಸುದ್ದಿ,**

**ದೂಪದಹಳ್ಳಿ :** ವಿಜಯನಗರ ಜಿಲ್ಲೆಯ ಕೊಟ್ಟೂರು ತಾಲೂಕಿನ ದೂಪದಹಳ್ಳಿ ಗ್ರಾಮದಲ್ಲಿ ದಿನಾಂಕ ಏ 30 ರ ಸಾಯಂಕಾಲ ಸುಮಾರು 5:20 ಗಂಟೆಗೆ ಕೊಟ್ಟೂರು ಗ್ರಾಮಾಂತರ ಶಾಖಾಧಿಕಾರಿ ಕೊಟ್ರೇಶ್ ಎಂಬುವರ ಹೊಲದಲ್ಲಿ ಲೈನ್ ಬದಲಾವಣೆ ಮಾಡುವಾಗ ತಪ್ಪು ಮಾಹಿತಿ ನೀಡಿ-ರೋ ಆರೋಪ. ಮೇಲಾಧಿಕಾರಿಗಳ ನಿರ್ಲಕ್ಷ್ಯತನ ಇರಬಹುದೇ.....? ಕರೆಂಟ್ ಶಾಕ್ ಒಡೆದು ಕಂಬದಲ್ಲಿ ನೇತಾಡಿದ ಲೈನ್ ಮ್ಯಾನ್ ಗಜಪುರ ಗ್ರಾಮದ ಅಜ್ಜಯ್ಯ 25 ವರ್ಷದ ಯುವಕ ಮೃತಪಟ್ಟ ಲೈನ್ ಮ್ಯಾನ್ ಅಜ್ಜಯ್ಯ

ಎಂಬುವರು ಹ್ಯಾಳ್ಯ ಪಂಚಾಯ್ತಿಯ ಲೈನ್ ಮ್ಯಾನ್ ಉಜ್ಜಯಿನಿ ಪಂಚಾಯ್ತಿಯ ಮಂಜುನಾಥ್ ಎಂಬ ಲೈನ್ ಮ್ಯಾನ್ ಇವರಿಬ್ಬರೂ ಕೊಟ್ರೇಶ್ ಗ್ರಾಮಾಂತರ ಶಾಖಾಧಿಕಾರಿ ಎಂಬುವರ ಹೊಲದಲ್ಲಿ ಟಿ.ಸಿ ಹಾಕಲು ಹೋದಾಗ ಹಿರಿಯ ಅಧಿಕಾರಿಗಳು ಸರಿಯಾದ ಮಾಹಿತಿ ನೀಡದೆ ಲೈನ್ ಬದಲಾವಣೆ ಮಾಡಲು



ಸೂಚನೆ ನೀಡಿರಬಹುದು ಆದರೆ ಅಜ್ಜಯ್ಯ ಎಂಬುವರು ಮೃತಪಟ್ಟಿರುವುದು ಹಲವು ಮನಸ್ಸುಗಳಿಗೆ ಬೇಸರ ಎಂದು ಅಲ್ಲಿನ ಸಾರ್ವಜನಿಕರು ಮತ್ತು ಸಂಘಟನಾಕಾರರು ಮಾತನಾಡಿ ಕೊಳ್ಳುತ್ತಿದ್ದರು.

ಕೊಟ್ಟೂರು ಪೊಲೀಸರು ಸ್ಥಳಕ್ಕೆ ಭೇಟಿ, ಪರಿಶೀಲನೆಗೆ ಮುಂದಾಗಿದ್ದಾರೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್. ಕೆ ನ್ಯೂಸ್ ಕನ್ನಡ ಚಾನಲ್: ಪ್ರದೀಪ್. ಕುಮಾರ್.ಸಿ.ಕೊಟ್ಟೂರು**

## ಗ್ರಾಹಕರ ಸೇವೆಯೇ ಮುಖ್ಯ ಗುರಿಯಾಗಿರಲಿ



**ರಬಕವಿ :** ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವ್ಯಾಪಾರಸ್ಥರು ಗ್ರಾಹಕರ ಸೇವೆಗೆ ಬದ್ಧರಾಗಿರಬೇಕು. ಗ್ರಾಹಕರ ಸೇವೆಯನ್ನು ಗುರಿಯನ್ನಾಗಿ ಸಿಕೊಂಡು ವ್ಯಾಪಾರ ಮಾಡಿದರೆ ಅನುಕೂಲವಾಗುತ್ತದೆ. ಜನಪರ ಮತ್ತು ಜನಪ್ರಿಯ ಬಂಗಾರದ ಆಭರಣಗಳನ್ನು 198 ವರ್ಷಗಳಿಂದ ಮಾರಾಟ ಮಾಡುತ್ತ ಬಂದಿರುವ ಚಂದೂಕಾಕಾ ಸರಾಫ್ ಜ್ವೇಲಸ9 ಸೇವೆಯನ್ನು ಮೆಚ್ಚುವಂತಹದು ಎಂದು ರಬಕವಿಯ ಗುರುದೇವ ಬ್ರಹ್ಮಾನಂದ ಆಶ್ರಮದ ಗುರುಸಿದ್ಧೇಶ್ವರ ಸ್ವಾಮೀಜಿ ತಿಳಿಸಿದರು.

ಅವರು ಶುಕ್ರವಾರ ಇಲ್ಲಿನ ಹಜಾರೆ ಬಜಾರ್ ನಲ್ಲಿ ನೂತನವಾಗಿ ಆರಂಭವಾದ ಚಂದೂಕಾಕಾ ಸರಾಫ್ ಜುವೆಲ್ಸ್ ನ್ನು ಉದ್ಘಾಟಿಸಿ ಮಾತನಾಡಿದರು.

ಶಾಸಕ ಸಿದ್ದು ಸವದಿ ಮಾತನಾಡಿ, ಈಗಾಗಲೇ ಸಾಕಷ್ಟು ಹೆಸರು ಮಾಡಿರುವ ಚುಂದೂಕಾಕಾ ಸರಾಫ್ ಜುವೆಲ್ಸ್ ನವರು ಈಗ ರಬಕವಿ ಬನಹಟ್ಟಿ ಹಾಗೂ ಸುತ್ತ ಮುತ್ತಲಿನ ನಗರ ಮತ್ತು ಗ್ರಾಮೀಣ ಭಾಗದ ಜನರಿಗೆ ಅನುಕೂಲವಾಗುವ ದಿಶೆಯಲ್ಲಿ ಆಧುನಿಕ

ಜಗತ್ತಿಗೆ ಬೇಕಾಗಿರುವ ಚಿನ್ನ, ಬೆಳ್ಳಿ ಮತ್ತು ವಜ್ರದ ಆಭರಣಗಳನ್ನು ಮಾರಾಟ ಮಾಡುತ್ತಿದ್ದಾರೆ. ಸುತ್ತಮುತ್ತಲಿನ ಜನರು ಇದರ ಲಾಭವನ್ನು ತೆಗೆದುಕೊಳ್ಳಬೇಕು.

ಸೇವಾ ಮನೋಭಾವನೆಯನ್ನು ಅಳವಡಿಸಿಕೊಂಡು ಈ ಭಾಗದ ಜನರಿಗೆ ಉತ್ತಮ ಸೇವೆಯನ್ನು ನೀಡಬೇಕು ಎಂದು ತಿಳಿಸಿದರು.

ಜುವೆಲ್ಸ್ ನ ಸಂಚಾಲಕ ಅತುಲ ಶಹಾ, ಹಜಾರೆ ಬಜಾರನ ಸತೀಶ ಹಜಾರೆ, ಗಣಪತರಾವ ಹಜಾರೆ, ಸಿದ್ಧಾರ್ಥ ಶಹಾ, ಆದಿತ್ಯ ಶಹಾ, ಸಂಗೀತಾ ಶಹಾ,

ಡಾ. ಮಹಾವೀರ ದಾನಿಗೊಂಡ, ಸಂಜಯ ತೆಗ್ಗಿ, ರಾಮಣ್ಣ ಹುಲಕುಂದ, ನೀಲಕಂಠ ಮುತ್ತೂರ,ಡಾ.ಜಿ.ಎಚ್.ಚಿತ್ತರಗಿ,ಮಹಾದೇವ ದುಪದಾಳ, ಮಹಾದೇವ ಕೋಟ್ಯಾಳ, ಶೇಖರ ದುಂಡಪ್ಪ ಕೊಟ್ರಶೆಟ್ಟಿ, ಪದ್ಮಾವತಿ ಹಜಾರೆ ಸೇರಿದಂತೆ ಇನ್ನೂ ಅನೇಕರು ಹಾಜರಿದ್ದರು.

## ಇಂದಿನ ಯುವಕರಿಗೆ ಬಸವಣ್ಣ ನಾಯಕನಾಗಲಿ: ಆನಂದ ಶ್ರೀಗಳು





**ಜಮಖಂಡಿ :** ಕಾಯಕವೇ ನಾಯಕ ಎಂಬ ಸಂದೇಶ ಕೊಟ್ಟಿರುವ ಬಸವಣ್ಣನವರು ಇಂದಿನ ಯುವಕರಿಗೆ ನಾಯಕನಾಗಬೇಕು. ಆದ್ದರಿಂದ ಸಂಪತ್ತಿನ ಬೆನ್ನುಬಿದ್ದು ಸಂತಸ ಕಳೆದುಕೊಳ್ಳಬಾರದು. ಜೀವನದ ಸತ್ಯವನ್ನು ಅರ್ಥಮಾಡಿಕೊಳ್ಳಬೇಕು ಎಂದು ಓಲೇಮಠದ ಆನಂದ ದೇವರು ಶ್ರೀಗಳು ಹೇಳಿದರು.

ಜಮಖಂಡಿ ನಗರದ ಐತಿಹಾಸಿಕ ಓಲೇಮಠದ ಆಶ್ರಯದಲ್ಲಿ ಬಸವ ಜಯಂತಿ ನಿಮಿತ್ಯ ಏಪ್ರಿಲ್ 15 ರಿಂದ 29 ರವರೆಗೆ ಹಮ್ಮಿಕೊಂಡಿರುವ ಶರಣರ ವಚನ ಪ್ರವಚನ ಮತ್ತು ಸದ್ಭಾವನಾ ಪಾದಯಾತ್ರೆ ಅಂಗವಾಗಿ ಹತ್ತನೆ ದಿನವಾದ ಗುರುವಾರ ಸಂಜೆ ನಡೆದ ಕಾರ್ಯಕ್ರಮದ ಸಾನಿಧ್ಯವಹಿಸಿ ಅವರು ಆಶೀರ್ವಚನ ನೀಡಿದರು.

ನಮ್ಮ ಹುಟ್ಟು-ಸಾವು ಭಗವಂತನ ಕೈಯಲ್ಲಿದೆ. ಯಾರೂ ಶಾಶ್ವತವಾಗಿ ಉಳಿಯಲು ಇಲ್ಲಿ ಬಂದಿಲ್ಲ. ಒಂದಿಲ್ಲ ಒಂದು ದಿನ ಮಣ್ಣಲ್ಲಿ ಮಣ್ಣಾಗಿ ಹೋಗಲೇ ಬೇಕು. ಭಗವಂತ ಕೊಟ್ಟಿರುವ ಸುಂದರವಾದ ಬದುಕನ್ನು ವ್ಯರ್ಥ ಮಾಡಿಕೊಳ್ಳಬಾರದು ಎಂದು ಆಶೀರ್ವಚನ ನೀಡಿದರು.

ಝುಂಜರವಾಡದ ಬಸವರಾಜೇಂದ್ರ ಶರಣರು ಪ್ರವಚನ ನುಡಿ ಹಂಚಿಕೊಳ್ಳುತ್ತ , ಭಗವಂತನ ಮೇಲಿನ ನಂಬಿಕೆಯ ಕೊರತೆಯಿಂದ ನರಕ ಸೃಷ್ಟಿ ಮಾಡಿಕೊಳ್ಳಬಾರದು. ಪವಿತ್ರವಾದ ನಂಬಿಕೆ ಅಂತಃಕರಣದಲ್ಲಿದ್ದರೆ ದುಃಖವಿಲ್ಲ, ನೋವಿಲ್ಲ. ಬದಲಾಗಿ ಏನೆಲ್ಲ ಸಾಧಿಸಬಹುದು ಎಂದರು.

ತೇರದಾಳ ಶಾಸಕ ಸಿದ್ದು ಸವದಿ ಮುಖ್ಯ ಅತಿಥಿಯಾಗಿ ಮಾತನಾಡಿ, ಬಸವಾದಿ ಶಿವಶರಣರ ಪ್ರತಿಯೊಂದು ವಚನವೂ ಬದುಕಿನ ದಾರಿಯನ್ನು ತೋರಿಸುತ್ತವೆ. ಬದುಕನ್ನು ಕಟ್ಟಿಕೊಳ್ಳಲು ಒಂದೇ ಒಂದು ವಚನ ಸಾಕು. ಸಮಾಜದಲ್ಲಿ ತಾಂಡವವಾಡುತ್ತಿರುವ ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಬಸವಣ್ಣನವರ ಅನುಯಾಯಿಗಳಾಗಿ ಕೆಲಸ ಮಾಡಬೇಕು ಎಂದರು.

ಕಂದಾಯ ಉಪ ವಿಭಾಗಾಧಿಕಾರಿ ಶ್ವೇತಾ ಬೀಡಿಕರ ಮಾತನಾಡಿ, ಬಸವಾದಿ ಶಿವಶರಣರು ಪ್ರತಿಪಾದಿಸಿದ್ದ ಶರಣ ಸಂಸ್ಕೃತಿ ಮತ್ತು ಶರಣ ಧರ್ಮವು ಜಗತ್ತಿನಾದ್ಯಂತ ಪ್ರಸಾರ ಮಾಡುವ ಹೊಣೆಯನ್ನು ಇಂದಿನ ಪೀಳಿಗೆ ನಿಭಾಯಿಸಬೇಕು. ಯಾವುದೇ ತಾರತಮ್ಯವಿಲ್ಲದೆ ಜೀವನ ಮಾಡಲು ಶರಣ ಸಂಸ್ಕೃತಿಯನ್ನು ಮತ್ತೆ ಮರಳಿ ತರಲು ಶ್ರಮಿಸಬೇಕು ಎಂದರು.

ಆಲಗೂರಿನ ಧರಿದೇವರ ಮಠದ ಲಕ್ಷ್ಮಣಮುತ್ಯಾ, ಕಲ್ಯಾಣ ಮಠದ ಗೌರಿಶಂಕರ ಶ್ರೀಗಳು, ಮರುಳರಾಧ್ಯ ದೇವರು ಶ್ರೀಗಳು ಸಾನಿಧ್ಯ ವಹಿಸಿದ್ದರು. ನಾಗಪ್ಪ ಸನದಿ, ವಕೀಲ ಸಿ. ಎಸ್. ಬಾಂಗಿ, ಪ್ರಾಚಾರ್ಯೆ ಡಾ. ಸುನಂದಾ ಶಿರೂರ, ಮಹಾದೇವ ಇಟ್ಟಿ, ಕಲ್ಲಯ್ಯ ಮಠಪತಿ, ಅಲಕಾ ಮಾಳಗಿ,

ಗಿರಿಜಾ ಮೈತ್ರಿ, ಸಂಗಪ್ಪ ದಡ್ಡಿಮನಿ, ಬಸವರಾಜ ಹೊಳೆಪ್ಪಗೋಳ, ನಗರಸಭೆ ಸದಸ್ಯೆ ಬಂದವ್ವ ಅರಕೇರಿ, ರಾಮು ಕಾಖಂಡಕಿ, ಸದಾಶಿವ ಲಾಲಸಂಗಿ, ಸಹನಾ ದಳವಾಯಿ, ಅನಿತಾ ಕಕಮರಿ, ಗಿರಿಜಾ ಬಡ್ಡೂರ, ರೇಖಾ ತೆಲಬಕ್ಕನವರ ಉಪಸ್ಥಿತರಿದ್ದರು.

ರಶ್ಮಿ ರೊಟ್ಟಿ ಭರತನಾಟ್ಯ ಪ್ರದರ್ಶಿಸಿದರು. ಅಂತಾರಾಷ್ಟ್ರೀಯ ಖ್ಯಾತಿಯ ನೃತ್ಯಗಾರ್ತಿ ಸಹನಾ ಹುನಗುಂದ ಪೌರಾಣಿಕ ಕಥೆಯ ನೃತ್ಯ ಪ್ರದರ್ಶಿಸಿದರು. ಬಸವ ಕೇಂದ್ರದ ದೀಪಾ ಯಡಹಳ್ಳಿ ಹಾಗೂ ಸದಸ್ಯೆಯರು ಕ್ರಾಂತಿಗೀತೆ ಹಾಡಿದರು. ಸರಸ್ವತಿ ಸಬರದ, ಸೌಂದರ್ಯ ಜಕಾತಿ ಪ್ರಾರ್ಥನೆ ಗೀತೆ ಹಾಡಿದರು. ಗದುಗಿನ ಗವಾಯಿ ರವಿಕುಮಾರ ಬೆಣ್ಣಿ, ತಬಲಾವಾದಕ ಹನಮಂತ ಅಂಕದ ಸಂಗೀತ ಸೇವೆ ಸಲ್ಲಿಸಿದರು. ಚಂದ್ರಶೇಖರ ಜತ್ತಿ ಸ್ವಾಗತಿಸಿದರು. ಶಿವಲೀಲಾ ಲಿಗಾಡಿ ನಿರೂಪಿಸಿದರು. ಶಿವಾನಂದ ಕೊಣ್ಣೂರ ವಂದಿಸಿದರು.

## ಜನತಾ ಶಿಕ್ಷಣ ಸಂಘದ ಆಡಳಿತ ಮಂಡಳಿ ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಲಿ

**ಬನಹಟ್ಟಿ :** ಇಂದು ನಡೆಯುವ ಜನತಾ ಶಿಕ್ಷಣ ಸಂಘದ ಆಡಳಿತ ಮಂಡಳಿಯ ಚುನಾವಣೆಯಲ್ಲಿ ಪ್ರಾಮಾಣಿಕವಾಗಿ ಮತ್ತು ಪಾರದರ್ಶಕವಾಗಿ ಸೇವೆ ಸಲ್ಲಿಸುವ ಶಕ್ತಿಯನ್ನು ಹೊಂದಿರುವ ಮತ್ತು ಆಡಳಿತದಲ್ಲಿ ಸಾಕಷ್ಟು ಅನುಭವವುಳ್ಳ ರಾಮಣ್ಣ ಭದ್ರನವರ ಬಣವನ್ನು ಎಲ್ಲರೂ ಬೆಂಬಲಿಸುವಂತೆ ಶಾಸಕ ಸಿದ್ದು ಸವದಿ ಕರೆ ನೀಡಿದರು.

ಅವರು ಇಲ್ಲಿನ ಭದ್ರನವರ ಕಲ್ಯಾಣ ಮಂಟಪದಲ್ಲಿ

ಜನತಾ ಶಿಕ್ಷಣ ಸಂಘದ ಆಡಳಿತ ಮಂಡಳಿಯ ಚುನಾವಣೆಯ ಪ್ರಚಾರ ಸಭೆಯಲ್ಲಿ ಮಾತನಾಡಿದರು.

ಆಡಳಿತ ಮಂಡಳಿಯವರು



ಪ್ರಾಮಾಣಿಕರಾಗಿದ್ದರೆ, ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡಲು ಸಾಧ್ಯ.

ಹಿಂದಿನ ಮೂರು ವರ್ಷಗಳಲ್ಲಿ ಸಂಘವು ಉತ್ತಮ ಸಾಧನೆಯನ್ನು ಮಾಡಿದೆ ಎಂದು ಶಾಸಕ ಸವದಿ ತಿಳಿಸಿದರು.

ಸಂಘದ ಹಿಂದಿನ ಸದಸ್ಯ ದುಂಡಪ್ಪ ಮಾಚಕನೂರ ಮಾತನಾಡಿ, ರಾಮಣ್ಣ ಭದ್ರನವರ ಬಣವು ಆಯ್ಕೆಯಾದರೆ, ಮುಂದಿನ ದಿನಗಳಲ್ಲಿ ಸಂಘಕ್ಕೆ ನೂತನ ಷೇರುದಾರರನ್ನು ನೋಂದಾಯಿಸಲು ಎಲ್ಲ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.

ಮುಖಂಡ ಶಂಕರ ಸೋರಗಾಂವಿ ಮಾತನಾಡಿ,

ಜನತಾ ಶಿಕ್ಷಣ ಸಂಘವು ಮುಂದಿನ ದಿನಗಳಲ್ಲಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಎಂಜಿನಿಯರಿಂಗ್, ಡಿಪ್ಲೊಮಾ, ಎಂಬಿಎ ಕಾಲೇಜುಗಳನ್ನು ಆರಂಭಿಸಲಿದೆ ಎಂದರು.

ಸಿದ್ದನಗೌಡ ಪಾಟೀಲ, ಶ್ರೀಶೈಲ ಧಬಾಡಿ, ಗಂಗಾಧರ ಭದ್ರನವರ, ಮಲ್ಲಿಕಾರ್ಜುನ ತುಂಗಳ, ಸುರೇಶ ಕೋಲಾರ, ಶ್ರೀಶೈಲ ಭದ್ರನವರ, ಸಿದ್ರಾಮ ಸವದತ್ತಿ, ಶಂಕರ ಜುಂಜಪ್ಪನವರ, ಸುರೇಶ ಚಿಂಡಕ ಸೇರಿದಂತೆ ರಾಮಣ್ಣ ಭದ್ರನ್ನವರ ಬಣದ ಸದಸ್ಯರು ಪಾಲ್ಗೊಂಡಿದ್ದರು.

## ಪಹಲ್ಗಾಮ್ ದಾಳಿ ಖಂಡಿಸಿ ಯುವ ಕಾಂಗ್ರೆಸ್ ಪ್ರತಿಭಟನೆ

**ರಬಕವಿ-ಬನಹಟ್ಟಿ :** ಕಾಶ್ಮೀರದ ಪ್ರವಾಸಿತಾಣಪಹಲ್ಗಾಮ್ನಲ್ಲಿಅಮಾಯಕ ಪ್ರವಾಸಿಗರ ಮೇಲೆ ನಡೆದ ಕ್ರೂರ ಭಯೋತ್ಪಾದಕ ದಾಳಿಯು ಖಂಡನೀಯವಾಗಿದ್ದು, ಕೂಡಲೇ ಅಪರಾಧಿಗಳಿಗೆ ಕಠಿಣ ಶಿಕ್ಷೆ ನೀಡಬೇಕೆಂದು ಯುವ ಕಾಂಗ್ರೆಸ್ ಪಕ್ಷದ ತೇರದಾಳ ಅಧ್ಯಕ್ಷ ಪ್ರವೀಣ ಪೂಜಾರಿ ಒತ್ತಾಯಿಸಿದರು.

ಶುಕ್ರವಾರ ರಾತ್ರಿ ನಗರದ ಗಾಂಧಿ ವೃತ್ತದಲ್ಲಿ ತಾಲೂಕು ಯುವ ಕಾಂಗ್ರೆಸ್‌ವತಿಯಿಂದನಡೆದಮೌನ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಧರ್ಮದ ಹೆಸರಿನಲ್ಲಿ ಕೊಲ್ಲುವ



ಹಿಂಸೆಯನ್ನು ಪ್ರಚೋದಿಸುವ ಕೃತ್ಯ ಖಂಡನಾರ್ಹವಾದುದು. ಗುಪ್ತಚರ ಇಲಾಖೆಯ ವೈಫಲ್ಯದಿಂದ ಇಂತಹ ಕೃತ್ಯಗಳು ದೇಶದಲ್ಲಿ ನಿರಂತರವಾಗಿವೆ. ರಾಷ್ಟ್ರ ರಕ್ಷಣೆಗೆ ಮುಂದಾಗುವಲ್ಲಿ ಕೇಂದ್ರ ಸರ್ಕಾರ ಮುಂದಾಗಬೇಕು. ಬದಲಾಗಿ ಭಾರತೀಯ ಮುಸ್ಲಿಮರನ್ನು ಪಾಕ್ ಮುಸಲ್ಮಾನರಂತೆ ಕಾಣುವ ವರ್ತನೆ ಖಂಡನೀಯ.

ಘಟನೆ ಸಂದರ್ಭ ಭಾರತೀಯ ಮುಸಲ್ಮಾನರ ಸೇವೆ ಅನನ್ಯವಾದುದು. ಇದನ್ನು ಕೇಂದ್ರ ಸರ್ಕಾರ ಅರಿಯಬೇಕೆಂದರು.

ಈ ಮೌನ ಪ್ರತಿಭಟನೆಯಲ್ಲಿ ಸೂರಜ್ ಅವಟಿ, ಹನಮಂತ ಲಠ್ಠೆ, ಅಜಯ ಗಾಣಿಗೇರ, ಜಬಿ ಮುಲ್ಲಾ, ಸಾಗರ ಕದಮ, ಜುನೇದ ಅತ್ತಾರ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ನಗರಸಭೆ ನೌಕರರಿಗೆ ಸರ್ಕಾರಿ ಸೌಲಭ್ಯಗಳನ್ನು ಕಲ್ಪಿಸಲು ಒತ್ತಾಯ



**ಮುಧೋಳ :** ನಗರಸಭೆ, ಮಹಾನಗರ ಪಾಲಿಕೆ ಹಾಗೂ ಸ್ಥಳೀಯ ಸಂಸ್ಥೆಗಳ ನೌಕರರು ಹಾಗೂ ಪೌರ ಕಾರ್ಮಿಕರಿಗೆ ರಾಜ್ಯ ಸರ್ಕಾರಿ ನೌಕರರಿಗಿರುವ ಸೌಲಭ್ಯಗಳನ್ನು ಕಲ್ಪಿಸಿ ಕೊಡಿ ಎಂದು ನಗರಸಭೆ ನೌಕರರು ಕಪ್ಪು ಪಟ್ಟಿ ಧರಿಸಿ ಮೌನ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿದರು.

ಶುಕ್ರವಾರ ಇಲ್ಲಿನ ನಗರ ಸಭೆ ಅಧ್ಯಕ್ಷರಿಗೆ, ಆಯುಕ್ತರಿಗೆ, ವೃತ್ತಪೊಲೀಸ್ ನಿರೀಕ್ಷಕರಿಗೆ ಹಾಗೂ ತಹಸೀಲ್ದಾರರಿಗೆ ಮನವಿ ಸಲ್ಲಿಸಿ ರಾಜ್ಯದಾದ್ಯಂತ ನಡೆದ ಪ್ರತಿಭಟನೆಗೆ ಪೂರಕ ಬೆಂಬಲ ನೀಡಿದರು.

ಏಪ್ರಿಲ್ 12 ರಿಂದ ಮೇ ತಿಂಗಳ 26 ರವರೆಗೆ 45 ದಿನಗಳ ಕಾಲ ಬಲಗೈಗೆ ಕಪ್ಪು ಪಟ್ಟಿ ಧರಿಸಿ , ಸಾರ್ವಜನಿಕರಿಗೆ ತೊಂದರೆಯಾಗದಂತೆ ಶಾಂತಿಯುತ ಪ್ರತಿಭಟನೆ ನಡೆಸುತ್ತಿದ್ದು, ಅಷ್ಟರಲ್ಲಿ ಸರ್ಕಾರ ನಮ್ಮ ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ರಾಜ್ಯಾದ್ಯಂತ ಉಗ್ರ ಪ್ರತಿಭಟನೆ ಅನಿವಾರ್ಯ ವಾಗುತ್ತದೆ ಎಂದು ಮನವಿ ಪತ್ರದಲ್ಲಿ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ಈ ಸಂದರ್ಭದಲ್ಲಿ ಪೌರ ನೌಕರರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಮಂಗಳೇಶ ಪೂಜಾರಿ, ಪ್ರಧಾನ ಕಾರ್ಯದರ್ಶಿ ಮಹಾದೇವ ಗುಡಿ, ಕಾರ್ಯದರ್ಶಿ ಎಂ.ಬಿ.ಹೊಸೂರ, ಗಣೇಶ ಬುರುಡ, ರಾಜು ಚೌವ್ಹಾಣ್, ಕುಮಾರ್ ಮೇತ್ರಿ, ಜೆ.ಟಿ.ಹಿರಲಕ್ಕಿ, ಪಿ.ಪಿ.ನೀಲಕಂಠಮಠ ಸೇರಿದಂತೆ ನಗರಸಭೆ ನೌಕರರು ಭಾಗವಹಿಸಿದ್ದರು.

# ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯಿಂದ 37 ಕಾರ್ಯಕ್ರಮಗಳ ಪಟ್ಟಿ



**ರಬಕವಿ-ಬನಹಟ್ಟಿ :** ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯು ಆರೋಗ್ಯವಂತ ಸಮಾಜ ನಿರ್ಮಾಣ ಮಾಡಲು ಮತ್ತು ಬಡವರಿಗೆ ಅನುಕೂಲವಾಗುವ ದಿಶೆಯಲ್ಲಿ ಒಟ್ಟು 37 ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಎಂದು ಜಮಖಂಡಿ ಘಟಕದ ಯೋಜನಾಧಿಕಾರಿ ನಿಂಗಪ್ಪ ತಿಳಿಸಿದರು.

ಅವರು ಶುಕ್ರವಾರ ಇಲ್ಲಿನ ಅಲ್ಲಮಪ್ರಭು ದೇವರ ಸಮುದಾಯ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೇಲ್ಛಾವಣಿಯ ಜೀರ್ಣೋದ್ಧಾರಕ್ಕಾಗಿ ರೂ. ಒಂದು ಲಕ್ಷ ಹಣದ ಮಂಜೂರಾತಿ ಆದೇಶಪ್ರತಿಯನ್ನು ನೀಡಿ ಮಾತನಾಡಿದರು.

ಸಮುದಾಯ ಭವನದ ಅಭಿವೃದ್ಧಿಗಾಗಿ ಒಟ್ಟು ರೂ. ಮೂರು ಲಕ್ಷ ಹಣವನ್ನು ದೇಣಿಗೆಯನ್ನಾಗಿ ನೀಡಿದೆ. ಜಮಖಂಡಿ ತಾಲ್ಲೂಕಿನಲ್ಲಿ ನಾಲ್ಕು ಕೆರೆಗಳ ಹೂಳೆತ್ತುವ ಕಾರ್ಯವನ್ನು ಸಂಘವು ಮಾಡಿದೆ. 83 ನಿರ್ಗತಿಕ ಮಕ್ಕಳಿಗೆ ಪ್ರತಿ ತಿಂಗಳು ತಲಾ ರೂ. ಒಂದು ಸಾವಿರ ಹಣವನ್ನು ಮತ್ತು ಉನ್ನತ ಶಿಕ್ಷಣ ಪಡೆಯುತ್ತಿರುವ 106 ಜನ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ಒಂದು ಸಾವಿರ ವಿದ್ಯಾರ್ಥಿ ವೇತನ ನೀಡುತ್ತಿದೆ. ಅಂಗವಿಕಲರಿಗೆ ಏಳು ಗಾಲಿ ಕುರ್ಚಿಗಳನ್ನು ನೀಡಲಾಗಿದೆ. ತಾಲ್ಲೂಕಿನಲ್ಲಿಯ 17 ದೇವಸ್ಥಾನಗಳಿಗೆ ಜೀರ್ಣೋದ್ಧಾರಕ್ಕಾಗಿ ಅನುದಾನವನ್ನು ನೀಡಲಾಗಿದೆ. ಮುಂದಿನ ದಿನಗಳಲ್ಲಿ ಈ ಭಾಗದ ಜನರ ಮತ್ತು ಸಮುದಾಯದ ಅಭಿವೃದ್ಧಿಗಾಗಿ ಇನ್ನಷ್ಟು ಗಮನ ನೀಡಲಾಗುವುದು ಎಂದು ನಿಂಗಪ್ಪ ತಿಳಿಸಿದರು.

ಬನಹಟ್ಟಿ ಘಟಕದ ಮೇಲ್ವಿಚಾರಕ ಶಿವಾನಂದ ಎಂ.ವೈ., ಶ್ರೀಶೈಲ ಪಾನಶೆಟ್ಟಿ, ಗುರುಸಿದ್ಧಪ್ಪ ಚನಾಳ, ದೇವೇಂದ್ರ ಚನಪನ್ನವರ, ಭೀಮಶಿ ಹೊರಗಿನಮನಿ, ಪ್ರಭು ಮುಂಡನಗೂರ, ಗೀತಾ ಬಾಬಾನಗರ ಸೇರಿದಂತೆ ಸಂಘದ ಸ್ವಯಂ ಸೇವಕರು ಉಪಸ್ಥಿತರಿದ್ದರು.

# ಡಾ. ಕೆ.ಕಸ್ತೂರಿರಂಗನ್ ಅವರ ನಿಧನಕ್ಕೆ ಸಂತಾಪ



**ಬಾಗಲಕೋಟೆ :** ಇಸ್ರೋ ಸಂಸ್ಥೆಯ ಮಾಜಿ ಅಧ್ಯಕ್ಷ, ಪದ್ಮವಿಭೂಷಣ ಡಾ.ಕೆ.ಕಸ್ತೂರಿ ರಂಗನ್ ಅವರ ನಿಧನಕ್ಕೆ ಬವಿವ ಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಚರಂತಿಮಠ ಕಂಬನಿ ಮಿಡಿದಿದ್ದಾರೆ.

2022ರ ನವೆಂಬರ್ ತಿಂಗಳಿನಲ್ಲಿ ಬಾಗಲಕೋಟೆಯ ಬವಿವ ಸಂಘಕ್ಕೆ ಅವರು ಭೇಟಿ ನೀಡಿದ ನೆನಪುಗಳನ್ನು ಮೆಲಕು ಹಾಕಿರುವ ಅವರು, ಬಸವೇಶ್ವರ ಕಲಾ, ವಿಜ್ಞಾನ, ವಾಣಿಜ್ಯ ಮಹಾವಿದ್ಯಾಲಯಗಳ ಅಮೃತ ಮಹೋತ್ಸವದಲ್ಲಿ ಕಸ್ತೂರಿ ರಂಗನ್ ಅವರು ಪಾಲ್ಗೊಂಡಿದ್ದರು. ಸಂಘ ಬೆಳೆದು ಬಂದ ಹಾದಿಯನ್ನು ಅವರು ಮುಕ್ತಕಂಠದಿಂದ ಶ್ಲಾಘಿಸಿದ್ದರು. ಬವಿವ ಸಂಘಕ್ಕೆ ಅಂಥ ಮಹನೀಯರು ಭೇಟಿ ನೀಡಿರುವುದು ನಮ್ಮ ಪಾಲಿನ ಸೌಭಾಗ್ಯ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಸ್ತೂರಿ ರಂಗನ್ ಅವರ ನಿಧನಕ್ಕೆ ಗೌರವ ಕಾರ್ಯದರ್ಶಿ ಮಹೇಶ ಅಥಣಿ, ವೈದ್ಯಕೀಯ ಕಾಲೇಜು ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಅಶೋಕ ಸಜ್ಜನ(ಬೇವೂರ), ಕಾಲೇಜುಗಳ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಗುರುಬಸವ ಸೂಳಿಭಾವಿ, ಸಂಘದ ಆಡಳಿತಾಧಿಕಾರಿ ಡಾ.ವಿಜಯಕುಮಾರ ಕಟಗಿಹಳ್ಳಿಮಠ, ಕಲಾ ಮಹಾವಿದ್ಯಾಲಯದ ಪ್ರಾಚಾರ್ಯ ಎಸ್.ಆರ್.ಮೂಗನೂರಮಠ ಸಂತಾಪ ಸೂಚಿಸಿದ್ದಾರೆ.

## ಸಾಯಿಮಂದಿರದಲ್ಲಿ ಶೀಘ್ರವೇ ಪಿರಾಮಿಡ್ ಸ್ಥಾಪನೆ। 21 ದಿನಗಳ ಧ್ಯಾನಶಿಬಿರಕ್ಕೆ ತೆರೆ

# ಧ್ಯಾನದ ಬಲದಿಂದ ಸುಜ್ಞಾನ: ಎಚ್.ಜಿ. ಮಿರ್ಜಿ



**ಬಾಗಲಕೋಟೆ :** ಅಭಿಮನ್ಯು ತನ್ನ ತಾಯಿ ಗರ್ಭದಲ್ಲಿರುವಾಗಲೇ ಚಕ್ರವ್ಯೂಹ ಬೇದಿಸುವುದನ್ನು ಕಲಿತಿದ್ದ. ಶಿಕ್ಷಣ ಎಂಬುದು ಗರ್ಭಕೋಶದಿಂದ ಶುರುವಾಗಿ ವಿಶ್ವಕೋಶದವರೆಗೆ ಇರುತ್ತದೆ. ಧ್ಯಾನ, ಯೋಗದ ಬಲದಿಂದ ಅವುಗಳನ್ನು ಸಿದ್ಧಿಸಿಕೊಳ್ಳಬಹುದಾಗಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಪ್ರಭಾರಿ ಉಪನಿರ್ದೇಶಕ ಎಚ್.ಜಿ.ಮಿರ್ಜಿ ಹೇಳಿದರು.

ವಿದ್ಯಾಗಿರಿಯ ಶ್ರೀಸಾಯಿ ಮಂದಿರದ ಆವರಣದಲ್ಲಿ ಪಿರಾಮಿಡ್ ಸ್ಪಿರಿಚುವಲ್ ಸೊಸೈಟಿಆಫ್ಇಂಡಿಯಾ,ಶ್ರೀಕುಮಾರೇಶ್ವರ ವಿಶ್ವಧರ್ಮ ಶಾಂತಾಶ್ರಮ, ವರದಾನೇಶ್ವರಿ ಮಹಿಳಾ ಸಂಘ ಹಾಗೂ ವಿದ್ಯಾಗಿರಿ ಸಮಾನ ವಯಸ್ಕರ ಹಿರಿಯ ನಾಗರಿಕೆ ವೇದಿಕೆಗಳಿಂದ ಹಮ್ಮಿಕೊಂಡಿದ್ದ 21 ದಿನಗಳ ಉಚಿತ ಆನಪಾನಸತಿ ಧ್ಯಾನ ದಾಸೋಹ ಶಿಬಿರದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಮಕ್ಕಳಿಗೆ 6ನೇ ವಯಸ್ಸಿನಿಂದ ಶಿಕ್ಷಣ ಶುರುವಾಗೋದಿಲ್ಲ. ಗರ್ಭಕೋಶದಲ್ಲಿರುವಾಗಲೇ ಅವುಗಳಿಗೆ ಶಿಕ್ಷಣ ನೀಡಲಾಗುತ್ತದೆ. ಅದು ಪುರಾತನ ಕಾಲದಿಂದಲೂ ಇತ್ತು. ಮುಂದವರಿದ ಆಧುನಿಕ ದೇಶಗಳಲ್ಲೂ ಅಂಥದೊಂದು ಶಿಕ್ಷಣ ಜಾರಿಗೆ ಬರುತ್ತಿದೆ. ಭಾರತೀಯರಾದ ನಮಗೆ ಯೋಗ, ಧ್ಯಾನದಂಥ ಅಪೂರ್ವ ಶಕ್ತಿ ಲಭಿಸಿವೆ. ಅವುಗಳನ್ನು ಬಳಿಸಿಕೊಂಡು ಮಕ್ಕಳನ್ನು ಸಶಕ್ತರನ್ನಾಗಿಸಬೇಕೆಂದರು. ಗರ್ಭಿಣಿಯರಿಗಾಗಿ ವಿಶೇಷ ಶಿಬಿರ ಆಯೋಜಿಸಲು ಅವರು ಸಲಹೆ ಮಾಡಿದರು.

ಪಿರಾಮಿಡ್ ಸ್ಪಿರಿಚುವಲ್ ಸೊಸೈಟಿ ಜಿಲ್ಲಾ ಸಂಚಾಲಕ, ಧ್ಯಾನಗುರು ರಾಜಶೇಖರ ಅಡಿಕೇನವರ ಮಾತನಾಡಿ, 2021ರಲ್ಲಿ ಬಾಗಲಕೋಟೆಗೆ ಬ್ರಹ್ಮರ್ಷಿ ಸುಭಾಷ್ ಪತ್ರಿಜಿ ಅವರು ಭೇಟಿ ನೀಡಿದಾಗ ಬಾಗಲಕೋಟೆಯ ಭಾಗ್ಯದ ಕೋಟೆ, ಧ್ಯಾನದ ಕೋಟೆ ತೆರೆದಿದೆ ಎಂದಿದ್ದರು. ಅದರಂತೆ ನಾವೆಲ್ಲ ಸೇರಿ ಬಾಗಲಕೋಟೆಯಲ್ಲಿ ಧ್ಯಾನಾಸಕ್ತರ ಬಳಗವನ್ನು ಹೆಚ್ಚಿಸಿದ್ದೇವೆ. ಇದು ಇನ್ನೂ ಹೆಚ್ಚಾಗಬೇಕು ಅದಕ್ಕೆಲ್ಲರೂ ಕೈಜೋಡಿಸಬೇಕೆಂದು ಮನವಿ ಮಾಡಿದರು.

ಧ್ಯಾನಾಸಕ್ತರ ಕೋರಿಕೆಯಂತೆ ಶ್ರೀಸಾಯಿಮಂದಿರದ ಬಯಲು ರಂಗಮಂದಿರದ ಮೇಲ್ಛಾವಣಿಯಲ್ಲಿ ಪಿರಿಮಿಡ್ ನಿರ್ಮಸಲು ಶ್ರೀಕುಮಾರೇಶ್ವರ ವಿಶ್ವಧರ್ಮ ಶಾಂತಾಶ್ರಮದ ಪದಾಧಿಕಾರಿಗಳು ಒಪ್ಪಿಕೊಂಡಿದ್ದಾರೆ. ಎಲ್ಲರೂ ಸೇರಿ ಅದರ ನಿರ್ಮಾಣ ಕಾರ್ಯದಲ್ಲಿ ಒಂದಾಗೋಣ ಎಂದರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ನಿಕಟಪೂರ್ವ ಜಿಲ್ಲಾ ಸಂಘಚಾಲಕ ಡಾ.ಸಿ.ಎಸ್.ಪಾಟೀಲ, ಶ್ರೀಕುಮಾರೇಶ್ವರ ವಿಶ್ವಧರ್ಮ ಶಾಂತಾಶ್ರಮದ ಕಾರ್ಯಾಧ್ಯಕ್ಷ ಶ್ರೀಶೈಲ ಕರಿಶಂಕರಿ, ನಿವೃತ್ತ ಬಿಇಒ ಎನ್.ಬಿ.ಗೊರವರ, ಹಿರಿಯ ನಾಗರಿಕರ ವೇದಿಕೆಯ ಬಸವರಾಜ ಇಂಡಿ, ಅನ್ನಪೂರ್ಣ ಹುಲ್ಯಾಳ, ಬಸವರಾಜ ಮಿಟ್ಟಲಕೋಡ, ಸತೀಶ ಕಲಬುರಗಿ, ತಿಪಶೆಟ್ಟಿ, ಮಹಾಬಳೇಶ್ವರ ಗುಂಡಗುಂಟಿ, ನಾರಾಯಣ ಸೋನಾರ, ಸಿದ್ದಪ್ಪ ಯಂಡಿಗೇರಿ, ಜಯಶ್ರೀ ಭದ್ರಶೆಟ್ಟಿ ಮತ್ತಿತರರು ಇದ್ದರು.

## ವಿಶ್ವ ಮಲೇರಿಯಾ ದಿನಾಚರಣೆ

# ಮಲೇರಿಯಾ ನಿಯಂತ್ರಣ ಪ್ರತಿಯೊಬ್ಬರ ಜವಾಬ್ದಾರಿ: ಡಾ. ಟಿ. ಲಿಂಗರಾಜು



**ಕೊಪ್ಪಳ :** ಮಲೇರಿಯಾ ನಿಯಂತ್ರಣ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಟಿ.ಲಿಂಗರಾಜು ಹೇಳಿದರು.

ಅವರು ಶುಕ್ರವಾರ ಕೊಪ್ಪಳ ನಗರದ ಹಳೆ ಜನರ ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳ ಕಛೇರಿ ಸಹಯೋಗದಲ್ಲಿ ವಿಶ್ವ ಮಲೇರಿಯಾ ದಿನಾಚರಣೆ-2025ರ ಅಂಗವಾಗಿ ಕೊಪ್ಪಳ ಜಿಲ್ಲೆಯಲ್ಲಿ ಮಲೇರಿಯಾ ರೋಗದ ಹರಡುವಿಕೆ ನಿಯಂತ್ರಣ ಹಾಗೂ ತಡೆಗಟ್ಟಲು ಕೈಗೊಳ್ಳಬೇಕಾದ ಮುಂಜಾಗ್ರತ ಕ್ರಮಗಳ ಬಗ್ಗೆ ಅರಿವು ಮೂಡಿಸಲು ಹಮ್ಮಿಕೊಂಡಿದ್ದ ಜನ ಜಾಗೃತಿ ಜಾಥಕ್ಕೆ ಚಾಲನೆ ನೀಡಿ ಮಾತನಾಡಿದರು.

ಮಲೇರಿಯಾ ನಿಯಂತ್ರಣಕ್ಕೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಎಲ್ಲಾ ರೀತಿ ಸೂಕ್ತ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲಾಗಿದೆ. ಪ್ರತಿ ವರ್ಷ 'ಏಪ್ರಿಲ್ 25'ರಂದು ಪ್ರಪಂಚದಾದ್ಯಂತ 'ವಿಶ್ವ ಮಲೇರಿಯ ದಿನ' ವನ್ನಾಗಿ ಆಚರಿಸಲಾಗುತ್ತಿದೆ. ಈಗ ಮಳೆಗಾಲ ಪ್ರಾರಂಭವಾಗುತ್ತಿದ್ದು, ಅಲ್ಲಲ್ಲಿ ಮಳೆ ನೀರು ನಿಂತು ಸೊಳ್ಳೆ ಉತ್ಪತ್ತಿ ತಾಣಗಳಾಗಿ ಮಾರ್ಪಟ್ಟು ಸೊಳ್ಳೆಗಳ ಸಂತತಿ ಹೆಚ್ಚಾಗಿ ಸೊಳ್ಳೆಗಳಿಂದ ಹರಡುವ ಮಲೇರಿಯಾದಂತಹ ರೋಗಗಳ ಹೆಚ್ಚಳವಾಗುವ ಎಲ್ಲಾ ಸಾಧ್ಯತೆ ಇರುತ್ತದೆ. ಸಾರ್ವಜನಿಕರು ತಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಮಲೇರಿಯಾ ರೋಗಕ್ಕೆ ನಿರ್ಧಿಷ್ಟ ಚಿಕಿತ್ಸೆ ಇದ್ದು, ಜನರೂ ಭಯಪಡುವ ಅವಶ್ಯಕತೆ ಇಲ್ಲ. ಯಾವುದೇ ಜ್ವರ ಇರಲಿ ಶೀಘ್ರವೇ ಹತ್ತಿರದ ಸರ್ಕಾರಿ ಆಸ್ಪತ್ರೆಯಲ್ಲಿ ರಕ್ತ ಪರೀಕ್ಷೆ ಮಾಡಿಸಿ ಉಚಿತ ಚಿಕಿತ್ಸೆ ಪಡೆಯಲು ಜನಸಮುದಾಯಕ್ಕೆ ಕರೆ ನೀಡಿದರು.

ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ. ಕೆ.ವೆಂಕಟೇಶ್ ಅವರು ಮಾತನಾಡಿ, ಇಡಿ ದೇಶದಾದ್ಯಂತ 2030 ರೊಳಗಾಗಿ ಮಲೇರಿಯಾ ರೋಗವನ್ನು ಸಂಪೂರ್ಣ ನಿವಾರಣೆಗೊಳಿಸಲು ಗುರಿ ನಿಗಧಿಪಡಿಸಿ ರಾಷ್ಟ್ರೀಯ ಮಲೇರಿಯಾ ನಿವಾರಣಾ ಮಾರ್ಗದರ್ಶಿ (ಓಚಿಣಿಥಿಟಿಚಿಟ ಈಡಿಚಿಟಜಫಾಡಿಇಈಂಡಿಓಚಿಟಚಿಡಿಚಿ ಇಟುಟುಟಿಚಿಣುಂಟಿ ಓಈಒಇ) ಯನ್ನು ಅನಾವರಣಗೊಳಿಸಲಾಗಿದೆ. ಅದರಂತೆ ಕರ್ನಾಟಕ ಸರಕಾರವು ಕೂಡ ರಾಜ್ಯದಲ್ಲಿ ಮಲೇರಿಯಾ ನಿವಾರಣಾ ಮಾರ್ಗದರ್ಶಿಯನ್ನು ಅನಾವರಣಗೊಳಿಸಿದ್ದು, ಅದರನ್ವಯ ರಾಜ್ಯದಲ್ಲಿ 2027ನೇ ಇಸ್ವಿ ವೇಳೆಗೆ ರಾಜ್ಯವನ್ನು ಮಲೇರಿಯಾ ಮುಕ್ತಗೊಳಿಸುವ ಗುರಿಯನ್ನು ನಿಗಧಿಪಡಿಸಲಾಗಿದೆ ಎಂದರು. 2025ನೇ ಸಾಲಿನ 'ವಿಶ್ವ ಮಲೇರಿಯ ದಿನಾಚರಣೆ'ಯ ಘೋಷಣೆಯು "ಮಲೇರಿಯಾ ನಮ್ಮೊಂದಿಗೆ ಕೊನೆಗೊಳ್ಳುತ್ತದೆ. ಮರು ಹೂಡಿಕೆ, ಮರು ಕಲ್ಪನೆ, ಮರು ಉತ್ತೇಜನ ನೀಡೋಣ" ಎಂಬುದಾಗಿರುತ್ತದೆ. ಅದರಂತೆ ಕೊಪ್ಪಳ ಜಿಲ್ಲೆಯನ್ನು 2027ರ ವೇಳೆಗೆ ಸಂಪೂರ್ಣ ಮಲೇರಿಯಾ ಮುಕ್ತ ಜಿಲ್ಲೆಯನ್ನಾಗಿಸಲು ಸರ್ವರ ಸಹಕಾರ ಅಗತ್ಯವಾಗಿದೆ.

ಮಲೇರಿಯಾ ರೋಗವು ಒಂದು ಸಾಂಕ್ರಾಮಿಕ ರೋಗವಾಗಿದ್ದು ಇದು ಸೋಂಕಿತ ಅನಾಫಿಲಿಸ್ ಜಾತಿಯ ಸೊಳ್ಳೆಗಳ ಕಚ್ಚುವಿಕೆಯಿಂದ ಒಬ್ಬರಿಂದ ಇನ್ನೊಬ್ಬರಿಗೆ ಹರಡುತ್ತದೆ ಹಾಗೂ ಈ ಸೊಳ್ಳೆಗಳು ಬಹುತೇಕ ಸಂಜೆ ಹೊತ್ತಿನಲ್ಲಿಯೇ ಕಚ್ಚುತ್ತವೆ ಹಾಗಾಗಿ ಜನಸಮುದಾಯವು ಸ್ವಯಂ ರಕ್ಷಣ ವಿಧಾನಗಳನ್ನು ಬಳಸಿ ಸೊಳ್ಳೆಗಳ ಕಚ್ಚುವಿಕೆಯಿಂದ ದೂರವಿರಬೇಕು ಎಂದು ಹೇಳಿದರು.

ಅನಾಫಿಲಿಸ್ ಸೊಳ್ಳೆಗಳು ಸ್ವಚ್ಛವಾದ ನೀರಿನಲ್ಲಿ, ಕೆರೆ, ಬಾವಿ, ಹೊಂಡ, ಕಾಲುವೆ ಮುಂತಾದ ನಿಂತ ನೀರಿನ ತಾಣಗಳಲ್ಲಿ ಮೊಟ್ಟೆಗಳನ್ನು ಇಟ್ಟು ಸಂತಾನಭಿವೃದ್ಧಿ ಮಾಡುತ್ತವೆ. ಆದ್ದರಿಂದ ಮನೆಯ ಒಳಗೆ ಮತ್ತು ಹೊರಗೆ ನೀರು ನಿಲ್ಲದಂತೆ ಎಚ್ಚರವಹಿಸಬೇಕು ಹಾಗೂ ನೀರು ಶೇಖರಣೆ ಸಲಕರಣೆಗಳನ್ನು ಸದಕಾಲ ಮುಚ್ಚಿಡಬೇಕು. ಕೊಪ್ಪಳ ಜಿಲ್ಲೆಯಲ್ಲಿ 2005 ರಲ್ಲಿ 6634 ಮಲೇರಿಯಾ ಪ್ರಕರಣಗಳು ವರದಿಯಾಗಿದ್ದು, 2017 ರಲ್ಲಿ ಕೇವಲ 159 ಮಲೇರಿಯಾ ಪ್ರಕರಣಗಳು 2019 ರಲ್ಲಿ 15 ಪ್ರಕರಣಗಳು ವರದಿಯಾಗಿವೆ. ಆದರೇ 2020 ರಿಂದ 2024-25 ರವರೆಗೆ ಯಾವುದೇ ಸ್ಥಳೀಯ ಮಲೇರಿಯಾ ಪ್ರಕರಣಗಳು ವರದಿಯಾಗಿರುವುದಿಲ್ಲ. ಕಳೆದ ನಾಲ್ಕು ವರ್ಷಗಳಿಂದ ಶೂನ್ಯ ಮಲೇರಿಯಾ ಸ್ಥಿತಿಯನ್ನು ಕಾಪಾಡಿಕೊಂಡು ಉತ್ತರಕರ್ನಾಟಕ ಜಿಲ್ಲೆಗಳಲ್ಲಿ ಶೂನ್ಯ ಮಲೇರಿಯಾ ಸ್ಥಿತಿಯನ್ನು ಕಾಪಾಡಿಕೊಂಡಿರುವ ಉತ್ತರ ಕರ್ನಾಟಕದ ಏಕೈಕ ಜಿಲ್ಲೆಯಾಗಿದ್ದು, ಕೊಪ್ಪಳ ಜಿಲ್ಲಾಢಳಿತದ ಸಹಕಾರ ಹಾಗೂ ಆರೋಗ್ಯ ಇಲಾಖೆಯ ಪರಿಶ್ರಮ ಕಾರಣವಾಗಿದೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ.ಪ್ರಕಾಶ್ ವಿ., ಜಿಲ್ಲಾ ಸರ್ವೇಕ್ಷಣ ಅಧಿಕಾರಿ ಡಾ. ನಂದಕುಮಾರ್, ಜಿಲ್ಲಾ ಕುಷ್ಟರೋಗ ನಿವಾರಣಾ ಅಧಿಕಾರಿ ಡಾ. ಪ್ರಕಾಶ್, ಜಿಲ್ಲಾ ಕುಷ್ಟರೋಗ ನಿವಾರಣಾ ಅಧಿಕಾರಿ ಡಾ. ಶಶಿಧರ್, ಕೊಪ್ಪಳ ತಾಲೂಕ ಆರೋಗ್ಯಾಧಿಕಾರಿ ಡಾ. ರಾಮಾಂಜನೇಯ ಸೇರಿದಂತೆ ಜಿಲ್ಲಾ ಆರೋಗ್ಯ ಇಲಾಖೆಯ ಎಲ್ಲಾ ಸಿಬ್ಬಂದಿಯವರು, ಆಶಾ ಕಾರ್ಯಕರ್ತೆಯರು, ನಗರ ಆರೋಗ್ಯ ಕೇಂದ್ರದ ವೈಧ್ಯಾಧಿಕಾರಿಗಳು & ಸಿಬ್ಬಂದಿಗಳು ಉಪಸ್ಥಿತರಿಸಿದ್ದರು.

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಿವಾನಂದ ಅವರು ಎಲ್ಲರಿಗೂ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಇದೆ ವೇಳೆ ಎಲ್ಲರೂ ಪ್ರತಿಜ್ಞಾವಿಧಿಯನ್ನು ಸ್ವೀಕರಿಸಿದರು.

ಕೊಪ್ಪಳ ನಗರದಾದ್ಯಂತ ವಿಜೃಂಭಣೆಯಿಂದ ಸಂಚರಿಸಿದ ಜನ ಜಾಗೃತಿ ಜಾಥದಲ್ಲಿ ತೆರೆದ ವಾಹನದಲ್ಲಿ ಮಲೇರಿಯಾ ವಿರೋಧಿ ಜಾಗೃತಿಗೀತೆಗಳನ್ನು ಹಾಡುವುದರ ಮೂಲಕ ಹಾಗೂ ಜನಜಾಗೃತಿ ಕರಪತ್ರಗಳನ್ನು ಹಂಚುವುದು, ಬ್ಯಾನರ್ ಮತ್ತು ಪೋಸ್ಟರ್‌ಗಳನ್ನು ಪ್ರದರ್ಶಿಸುವುದರ ಮೂಲಕ ಸಾರ್ವಜನಿಕರಿಗೆ ಅರಿವು ಮೂಡಿಸಲಾಯಿತು.

# ಮೇ. 4 ರಂದು ಪುಣ್ಯಸ್ಮರಣೋತ್ಸವ



**ನವಲಗುಂದ :** ತಾಲ್ಲೂಕು ಶಿರಕೋಳ ಗ್ರಾಮದ ಹಿರೇಮಠದಲ್ಲಿ ಶ್ರೀ ಗುರುಸಿದ್ಧೇಶ್ವರ ಜನಸೇವಾ ಟ್ರಸ್ಟ್ ವತಿಯಿಂದ ಶ್ರೀ ಚನ್ನಬಸವ ಪಟ್ಟದ್ದೇವರ 56 ನೇ ಪುಣ್ಯಸ್ಮರಣೋತ್ಸವ ಸಮಾರಂಭವನ್ನು ಮೇ 4 ರಂದು ಆಯೋಜಿಸಲಾಗಿದೆ.

ಸಾಗರದ ರಾಜಗುರು ಕೆಳದಿ ಸಂಸ್ಥಾನ ಹಿರೇಮಠದ ಶ್ರೀ ಷ.ಬ್ರ. ಡಾ. ಮಹೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸುವರು. ಶಿರಕೋಳ ಹಿರೇಮಠದ ಶ್ರೀ ಮಠದ ಪಟ್ಟಾಧ್ಯಕ್ಷರಾದ ಶ್ರೀ ಷ.ಬ್ರ.ಗುರುಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ನೇತೃತ್ವ ವಹಿಸುವರು.

ಮೇ. 1 ರಿಂದ ಮೇ 4 ರವರೆಗೆ ಪ್ರಾತಃಕಾಲ 7 ಗಂಟೆಗೆ ಕರ್ತೃಶ್ರೀ ಚನ್ನಬಸವ ಶಿವಯೋಗಿಗಳ ಗದ್ದುಗೆಗೆ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾಮಂಗಲ ಜರಗುವುದು.

ಗೋರಟಾ ಬಸವ ಕಲ್ಯಾಣದ ಶ್ರೀ ವಿಶ್ವಾರಾಧ್ಯ ಸ್ವಾಮಿಗಳು ಪ್ರತಿ ನಿತ್ಯ ರಾತ್ರಿ 8 ಗಂಟೆಗೆ ಆಧ್ಯಾತ್ಮಿಕ ಪ್ರವಚನ ನಡೆಸುವರು.

ಕಾರ್ಯಕ್ರಮದಲ್ಲಿ ಬನ್ನೂರ ಚಿಕ್ಕಮಠದ ಶ್ರೀ ಷ.ಬ್ರ.ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು, ಸುಳ್ಳ ಹಾಗೂ ಹೂಲಿ ಹಿರೇಮಠದ ಶ್ರೀ ಷ.ಬ್ರ.ಶಿವಸಿದ್ಧರಾಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ಬ್ಯಾಹಟ್ಟಿ ಹಿರೇಮಠದ ಶ್ರೀ ಷ.ಬ್ರ. ಮರುಳಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ಮುತ್ನಾಳ-ಬೆಟಸೂರ ಹಿರೇಮಠದ ಶ್ರೀ ಷ.ಬ್ರ. ಶಿವಾನಂದ ಶಿವಾಚಾರ್ಯ ಮಹಾಸ್ವಾಮಿಗಳು, ಮೊರಬ ಜಡೀಮಠದ ಶ್ರೀ ಷ.ಬ್ರ. ಮಹೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ಲಿಂಗಸೂರು ಮಾತಾ ಮಾಣಿಕೇಶ್ವರ ಆಶ್ರಮದ ಶ್ರೀ ಮಾತಾ ನಂದಿಕೇಶ್ವರ ಅಮ್ಮನವರು, ಶಿರಕೋಳ ಸಿದ್ಧಾರೂಢ ಮಠದ ಶ್ರೀ ಶ್ರೋ.ಬ್ರ.ಚಿದಾನಂದ ಮಹಾಸ್ವಾಮಿಗಳು ಪ್ರತಿ ನಿತ್ಯ ಉಪದೇಶಾಮೃತ ಮಾಡುವರು.

ಮೇ. 03 ರಂದು ಶ್ರೀ ಷ.ಬ್ರ.ಗುರುಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳ 29 ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಜರುಗುವುದು. ಮೇ. 12 ರಿಂದ ಮೇ. 16 ರವರೆಗೆ ಶಿರಕೋಳ ಗ್ರಾಮದ ಕಲ್ಮೇಶ್ವರ ಜಾತ್ರಾ ಮಹೋತ್ಸವದ ಪ್ರಯುಕ್ತ 12 ರಂದು ಶ್ರೀ ಕಲ್ಮೇಶ್ವರ ದೇವರ ರಥೋತ್ಸವ, 13 ರಂದು ಕಡುಬಿನ ಕಾಳಗ, 15 ರಂದು ಶ್ರೀ ಮೈಲಾರಲಿಂಗೇಶ್ವರ ಜಾತ್ರೆ, 16 ರಂದು ಗ್ರಾಮದೇವಿಯರ ಉಡಿ ತುಂಬುವ ಕಾರ್ಯಕ್ರಮಗಳು ಜರುಗಲಿವೆ ಎಂದು ಆಯೋಜಕರು ಪ್ರಕಟಣೆ ತಿಳಿಸಿದ್ದಾರೆ.

# ಹಡಪದ ಸಮಾಜ ಧ್ವನಿಯಿಲ್ಲದ ಸಮಾಜ: ಹನುಮಂತಪ್ಪ




**ಕೊಪ್ಪಳ :** ಹಡಪದ ಸಮಾಜ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಅತ್ಯಂತ ಹಿಂದುಳಿದ ಸಮಾಜ ವಾಗಿದ್ದು ಧ್ವನಿಯಿಲ್ಲದ ಸಮಾಜವಾಗಿದೆ ಎಂದು ಕೊಪ್ಪಳ ಜಿಲ್ಲಾ ಹಡಪದ ಸಮಾಜದ ನೂತನ ಅಧ್ಯಕ್ಷ ಹನುಮಂತಪ್ಪ ಸರಿಗಮ ಹೇಳಿದರು.

ಅವರು ಗುರುವಾರದಂದು ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ, ಉದ್ದೇಶಿಸಿ ಮಾತನಾಡಿ ರಾಜ್ಯ ಸರ್ಕಾರ ಹಡಪದ ಸಮಾಜಕ್ಕೆ ಎಲ್ಲಾ ರೀತಿಯ ನೆರವು ನೀಡಬೇಕು, ರಾಜ್ಯದಲ್ಲಿ ಹಡಪದ ಸಮಾಜ ಒಂಬತ್ತು ಲಕ್ಷ ಜನಸಂಖ್ಯೆ ಇದ್ದು ಆದರೆ 5 ಲಕ್ಷ ಎಂದು ತೋರಿಸಿರುವುದು ಸರಿಯಲ್ಲ ಸರಿಯಾದ ರೀತಿ ಸಂಖ್ಯೆ ತೋರಿಸುವಂತೆ ಸರಕಾರವನ್ನು ಒತ್ತಾಯಿಸಿದರು.

ಪದಾಧಿಕಾರಿಗಳಾಗಿ

ತಾಲೂಕ ಅಧ್ಯಕ್ಷರಾಗಿ ಅಂದಪ್ಪ ಸಂಗಾಪೂರ, ಉಪಾಧ್ಯಕ್ಷರಾಗಿ ವಿರುಪಾಕ್ಷಪ್ಪ ದೊಡ್ಡಮನಿ, ಬಸಾಪುರ. ಪ್ರಧಾನ ಕಾರ್ಯದರ್ಶಿಯಾಗಿ ಮಹೇಶ ಹಡಪದ, ಭಾಗ್ಯನಗರ, ಸಹ ಕಾರ್ಯದರ್ಶಿ ನಿಂಗೆಶಪ್ಪ ಹಡಪದ, ಗೊಂಡಬಾಳ,

ಖಜಾಂಚಿ ಗವಿಸಿದ್ದಪ್ಪ ಹಡಪದ, ದದೇಗಲ್, ಉಪ ಖಜಾಂಚಿಯಾಗಿ ಕೊಟ್ರೇಶ ಹಡಪದ,

ನಿರ್ದೇಶಕರಾಗಿ ಮಾರುತೇಶ ಹಾಲಹಳ್ಳಿ, ಈರಣ್ಣ ಹಡಪದ, ದದೇಗಲ್, ಕಳಕಪ್ಪ ಹಡಪದ, ಇರಕಲ್ಲಗಡ್, ಈಶ್ವರ ಸಾಹುಕಾರ್ ಬೇವಿನಾಳ, ವಿರೇಶ ಹಡಪದ ಕೋಳೂರು ಆಯ್ಕೆಯಾಗಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಹಡಪದ ಸಮಾಜದ ಜಿಲ್ಲಾ ಉಪಾಧ್ಯಕ್ಷ ಗುಂಡಪ್ಪ ಹಡಪದ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗವಿಸಿದ್ದಪ್ಪ ಕಾಟ್ರಳ್ಳಿ, ಯುವ ಘಟಕದ ಅಧ್ಯಕ್ಷ ಬಸವರಾಜ ಹಡಪದ್, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಮಲ್ಲಪ್ಪ ಹಡಪದ, ಕೊಪ್ಪಳ ತಾಲೂಕು ಅಧ್ಯಕ್ಷ ಅಂದಪ್ಪ ಹಡಪದ ಉಪಸ್ಥಿತರಿದ್ದರು.

# ಸುಪೋಷಿತ್ ಅಭಿಯಾನ: ಕಿನ್ನಾಳದಲ್ಲಿ ಬೀದಿ ನಾಟಕ ಪ್ರದರ್ಶನ



**ಕೊಪ್ಪಳ :** ಕೇಂದ್ರ ಸರಕಾರ ಜಾರಿಗೆ ತಂದಿರುವ ಸುಪೋಷಿತ್ ಅಭಿಯಾನ ಕುರಿತು ಜನಸಾಮಾನ್ಯರಿಗೆ ಅರಿವು ಮೂಡಿಸುವ ಬೀದಿ ನಾಟಕ ಪ್ರದರ್ಶನವನ್ನು ಕೇಂದ್ರ ಸಂವಹನ ಇಲಾಖೆ ಬೆಂಗಳೂರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಕೊಪ್ಪಳ ಇವರ ಆಶ್ರಯದಲ್ಲಿ ಕುಷ್ಟಗಿಯ ಜನ ಜಾಗೃತಿ ಕಲಾ ರಂಗ ಸಂಸ್ಥೆ ರಿ ಇವರಿಂದ ಕಿನ್ನಾಳ ಗ್ರಾಮದಲ್ಲಿ ನಡೆಸಲಾಯಿತು.

ಕಾರ್ಯಕ್ರಮವನ್ನು ತಮಟೆ ಬಾರಿಸುವ ಮೂಲಕ ಮಹಿಳಾ ಮೇಲ್ವಿಚಾರಕಿಯರಾದ ಲಕ್ಷ್ಮಿದೇವಿ ರೆಡ್ಡಿ ಅವರು ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ಭಾರತ ಸರ್ಕಾರದ ಪ್ರಧಾನಮಂತ್ರಿಯವರು ಘೋಷಣೆ ಮಾಡಿದ ಸುಪೋಷಿತ್ ಗ್ರಾಮಪಂಚಾಯತ್ ಅಭಿಯಾನ ಯೋಜನೆಯು ಮುಖ್ಯವಾಗಿ ಆ ಪೌಷ್ಟಿಕತೆಯಿಂದ ಬಳಲುತ್ತಿರುವ ಗರ್ಭಿಣಿಯರು ಮಕ್ಕಳು ಬಾಣಂತಿಯರು ಅವರ ಆರೋಗ್ಯ ಸುಧಾರಣೆಗಾಗಿ ಜಾರಿಗೆ ತಂದಿರುವ ಮಹತ್ವವಾದ ಯೋಜನೆ ಆಗಿದೆ ಎಲ್ಲರೂ ಮಾಹಿತಿ ತಿಳಿದು ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ಸದಸ್ಯರಾದ ಮಂಜುನಾಥ ಹುದ್ದಾರ್, ಅಂಗನವಾಡಿ ಕಾರ್ಯಕರ್ತೆಯರಾದ ಸಂತೋಷಿಮಾತಾ, ರೇಣುಕಾ ಜಾಲಿಹಾಳ್, ಭಾರತಿ ವಾಲ್ಮೀಕಿ, ಗೀತಾ, ಲಕ್ಷ್ಮಿ, ರೇಣುಕಾ ಬಂಡಿ ಇತರೆ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸ್ತ್ರೀ ಶಕ್ತಿ ಗುಂಪಿನ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಜಾಗೃತಿ: ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಶರಣಪ್ಪ ವಡಿಗೇರಿ ಅವರ ನೇತೃತ್ವದಲ್ಲಿ ಯೋಜನೆಯ ಕುರಿತು ವಿವಿಧ ಸನ್ನಿವೇಶಗಳು, ಜಾಗೃತಿ ಗೀತೆಗಳು ಮೂಲಕ ಪ್ರದರ್ಶನ ನೀಡಿದ ಬೀದಿನಾಟಕವು ಜನಮನ ರಂಜನೆಯೊಂದಿಗೆ ಅರಿವು ಮೂಡಿಸಿ ಪ್ರದರ್ಶನ ನೀಡಿದರು.

# ಡಾ. ರಾಜ್‌ಕುಮಾರ್‌ರವರ 97ನೇ ಜನ್ಮ ದಿನಾಚರಣೆ

## ಕನ್ನಡ ಭಾಷಾಭಿಮಾನವನ್ನು ಬೆಳೆಸಿದವರು ಡಾ. ರಾಜ್‌ಕುಮಾರ್: ಚಲನಚಿತ್ರ ಅಕಾಡೆಮಿ ಸದಸ್ಯೆ ಸಾವಿತ್ರಿ ಮುಜುಮದಾರ

**ಕೊಪ್ಪಳ:** ಡಾ.ರಾಜ್‌ಕುಮಾರ್ ರವರು ಕೇವಲ ಕಲಾವಿಧರಾಗಿ ಹಾಗೂ ಕನ್ನಡ ಕಲಾ ಅರಾಧಕರಾಗಿ ಉಳಿಯದೇ ಅವರು ಕನ್ನಡ ಭಾಷಾಭಿಮಾನವನ್ನು ಬೆಳೆಸಿದ್ದರು ಎಂದು ಕರ್ನಾಟಕ ಚಲನಚಿತ್ರ ಅಕಾಡೆಮಿ ಸದಸ್ಯರಾದ ಸಾವಿತ್ರಿ ಮುಜುಮದಾರ ಹೇಳಿದರು.

ಅವರು ಗುರುವಾರ ಕೊಪ್ಪಳ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕೊಪ್ಪಳ ಇವರ ಸಹಯೋಗದಲ್ಲಿ ಏರ್ಪಡಿಸಲಾಗಿದ್ದ ಕನ್ನಡ ಚಲಚಿತ್ರ ರಂಗ ಕಂಡ ಮೇರು ನಟ, ನಟ ಸಾರ್ವಭೌಮ, ಕರ್ನಾಟಕ ರತ್ನ, ಪದ್ಮಭೂಷಣ ಡಾ. ರಾಜ್‌ಕುಮಾರ್ ರವರ 97ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಡಾ. ರಾಜ್‌ಕುಮಾರ್ ರವರು ಎಲ್ಲರಿಗೂ ಆದರ್ಶ ವ್ಯಕ್ತಿಗಳಾಗಿದ್ದರು. ಆಗಿನ ಕಾಲದಲ್ಲಿ ತುಂಬಾ ಜನ ರಾಜ್‌ಕುಮಾರ್ ರವರ ಜೀವನವನ್ನು ಆದರ್ಶವಾಗಿಟ್ಟುಕೊಂಡು ಬದಲಾಗಿದ್ದಾರೆ.

ಕರ್ನಾಟಕ ರಾಜ್ಯ ಹಾಗೂ ಭಾರತ ಮಾತ್ರವಲ್ಲದೇ ಜಾಗತಿಕ ಮಟ್ಟದಲ್ಲಿ ಅರಣ್ಯಕ್ಕೆ ಸಂಬಂಧಿಸಿ ಮೊಟ್ಟ ಮೊದಲ ಚಲನಚಿತ್ರ ಮಾಡಿದವರೇ ಡಾ. ರಾಜ್‌ಕುಮಾರ್. ಅವರು ಕೇವಲ ನಟರಾಗದೇ ಗೋಕಾಕ್ ಚಳುವಳಿ ಮೂಲಕ ಇಡಿ ಕನ್ನಡ ಚಿತ್ರರಂಗ ಹಾಗೂ ಎಲ್ಲಾ ಸಾಹಿತಿಗಳ ಜೊತೆಗೆ ಕರ್ನಾಟಕ ರಾಜ್ಯವನ್ನು ಸುತ್ತಿ ಕನ್ನಡ ಭಾಷಾಭಿಮಾನ ಬೆಳೆಸಿದ್ದರು. ನಮ್ಮ ಅನ್ನದ ಭಾಷೆ ಯಾಕೆ ಬೇಕು, ನಮ್ಮ



ಜೀವನದಲ್ಲಿ ಈ ಭಾಷೆಯ ಮಹತ್ವ ಏನು ಎಂಬುವುದನ್ನು ತೋರಿಸಿಕೊಟ್ಟಿದ್ದರು ಎಂದರು.

ಬೇರೆ ರಾಜ್ಯದ ದೊಡ್ಡ-ದೊಡ್ಡ ನಟರೆಲ್ಲಾ ರಾಜಕಾರಣಕ್ಕೆ ಹೋಗಿದ್ದಾರೆ. ಡಾ. ರಾಜ್‌ಕುಮಾರ್ ರವರು ಮನಸ್ಸು ಮಾಡಿದರೆ, ಅವರು ರಾಜಕಾರಣಿಯಾಗಿ ಇಡಿ ಕರ್ನಾಟಕವನ್ನು ಆಳಬಹುದಾಗಿತ್ತು. ಆದರೆ, ಅವರು ಕೇವಲ ಕಲಾವಿಧರಾಗಿ, ಕನ್ನಡ ಕಲಾ ಅರಾಧಕರಾಗಿ ಪ್ರತಿಯೊಬ್ಬ ಕನ್ನಡಿಗರ ಮನದಲ್ಲಿ ಉಳಿದಿದ್ದಾರೆ. ಬೇರೆ ಭಾಷೆಗಳಲ್ಲಿ ಅವಕಾಶಗಳು ಸಿಕ್ಕರು ಸಹ ಕನ್ನಡ ಭಾಷೆಯನ್ನು ಬಿಟ್ಟು ಬರುವುದಿಲ್ಲ ಎಂದು ಹೇಳಿದ್ದರು.

ಅವರ ಕಲೆ ಕನ್ನಡ ಭಾಷೆಗೆ ಮಾತ್ರ ಸಿಮಿತವಾಗಿತ್ತು. ರಾಜ್‌ಕುಮಾರ್ ರವರು ಕನ್ನಡದ ಆಸ್ತಿ, ಶಕ್ತಿ, ಕನ್ನಡದ ಅಸ್ಮಿತೆಯಾಗಿದ್ದಾರೆ.

ಅವರ ಕುಟುಂಬದವರು ಚಿತ್ರರಂಗಕ್ಕೆ ಅಷ್ಟೆ ಅಲ್ಲದೇ ಸಾಮಾಜಿಕವಾಗಿಯೂ ಸಹ ಬಹಳ ದೊಡ್ಡ ಕೊಡುಗೆಯನ್ನು ನೀಡಿದ್ದಾರೆ ಎಂದು ಹೇಳಿದರು.

ಜಿಲ್ಲಾ ತರಬೇತಿ ಸಂಸ್ಥೆಯ ಪ್ರಾಚರ್ಯರಾದ ಕೃಷ್ಣಮೂರ್ತಿ ದೇಸಾಯಿ ಅವರು ಮಾತನಾಡಿ, ಡಾ. ರಾಜ್‌ಕುಮಾರ್ ರವರು ಕನ್ನಡ ಚಲನ ಚಿತ್ರರಂಗದಲ್ಲಿ ಅತ್ಯಂತ ಪ್ರಭಾವಿ ನಟರಾಗಿ ಸುಮಾರು ಐದು ದಶಕಗಳ ಕಾಲ ಚಿತ್ರರಂಗದಲ್ಲಿ ತಮ್ಮದೆ ಆದ ಚಾಪನ್ನು ಮೂಡಿಸಿದ್ದರು.

ನಾಟಕ ಕಂಪನಿಗಳಿಂದ ಹಿಡಿದು ಸಿನಿಮಾ ಕಂಪನಿಗಳವರೆಗೆಗೂ ತಮ್ಮ ಪ್ರತಿಭೆಯನ್ನು ತೋರಿಸಿ, ಇತರರಿಗೆ ಮಾರ್ಗದರ್ಶಕರಾಗಿದ್ದರು. ದಾರಿ ತಪ್ಪಿದ ಮಗ, ಬಡವರ ಬಂಧು, ಕವಿರತ್ನ ಕಾಳಿದಾಸ, ಭಕ್ತ ಕುಂಬಾರ, ಹೀಗೆ ಹಲವಾರು ಚಿತ್ರಗಳಲ್ಲಿ ನಟಿಸುವ ಮೂಲಕ ಕನ್ನಡಿಗರ ಮನದಲ್ಲಿ ಅಜರಾಮರವಾಗಿದ್ದಾರೆ. ಚಲನ ಚಿತ್ರಗಳಲ್ಲಿನ ಅವರ ನಟನೆ, ಸಂಭಾಷಣೆ, ಸಂಗೀತ, ಸ್ವರ ಸಂಯೋಜನೆ ಅರ್ಥಗರ್ಭಿತವಾಗಿದ್ದವು. ಡಾ. ರಾಜ್‌ಕುಮಾರ್ ರವರು ಕನ್ನಡ ಚಿತ್ರರಂಗಕ್ಕೆ ವಿಶೇಷವಾದ ಸ್ಥಾನ-ಮಾನ ತಂದು ಕೊಟ್ಟವರಾಗಿದ್ದಾರೆ ಎಂದರು.

ಪುಷ್ಪನಮನ ಸಲ್ಲಿಕೆ ಹಾಗೂ ಸಂಗೀತ: ಡಾ. ರಾಜ್‌ಕುಮಾರ್ 97ನೇ ಜನ್ಮದಿನಾಚರಣೆ ನಿಮಿತ್ತ ಕೊಪ್ಪಳ ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ ಮಾಲಗಿತ್ತಿ ಅವರು ರಾಜ್‌ಕುಮಾರ್ ರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಗೌರವ ಸಮರ್ಪಿಸಿದರು. ಕಲಾವಿದ ಬಾಷು ಹಿರೇಮನಿ ಕಿನ್ನಾಳ ಹಾಗೂ ಚಂದನ ಭದ್ರಾವತಿ ಅವರು ರಾಜ್‌ಕುಮಾರ್ ರವರ ಅಭಿನಯದ ಚಲನಚಿತ್ರಗಳ ಗೀತೆಗಳನ್ನು ಹಾಡಿದರು.

# ಸೇವಾ ನ್ಯೂನತೆ: ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಿಂದ ತೀರ್ಪು ಪ್ರಕಟ

**ಕೊಪ್ಪಳ:** ಫಿರ್ಯಾದುದಾರ ಗ್ರಾಹಕರಿಗೆ ಎದುರುದಾರ ಬಿಯುನೈಟೆಡ್ ಇಂಡಿಯಾ ಕಂಪನಿ ಲಿಮಿಟೆಡ್, ಗಂಗಾವತಿ ವತಿಯಿಂದ ಉಂಟಾದ ಸೇವಾ ನ್ಯೂನತೆ ಹಿನ್ನೆಲೆಯಲ್ಲಿ ಕೊಪ್ಪಳ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಿಂದ ತೀರ್ಪು ಪ್ರಕಟಿಸಲಾಗಿದೆ.

ಗ್ರಾಹಕ ಫಿರ್ಯಾದು ಸಂಖ್ಯೆ: 50/2024 ರಲ್ಲಿನ ಅಂತಿಮ ತೀರ್ಪಿನ ಸಾರಾಂಶದನ್ವಯ ದೂರುದಾರರಾದ ಪೂಕರಾಜ್ ಜೈನ್ ತಂದೆ ಮಿಸ್‌ವಾಲ್ ಜೈನ್, ವ್ಯಾಪಾರಿ, ಸಾ: ಬನ್ನಿಮರದ್ ಕ್ಯಾಂಪ್, ಸಾ: ಗಂಗಾವತಿ, ಜಿಲ್ಲೆ ಕೊಪ್ಪಳ ಇವರು ಎದುರುದಾರ ಯುನೈಟೆಡ್ ಇಂಡಿಯಾ ಕಂಪನಿ ಲಿಮಿಟೆಡ್, ಗಂಗಾವತಿ ಇವರಲ್ಲಿ ತಮ್ಮ ನಿವಾಸಕ್ಕೆ ಎದುರುದಾರರ ಕಂಪನಿಯಿಂದ ಪಾಲಸಿಯನ್ನು ದಿನಾಂಕ 14-01-2008 ರಿಂದ 13-01-2028ರ ಅವಧಿಗೆ ವಿಮಾ ಪಾಲಸಿ ಮೌಲ್ಯ ರೂ. 10,95,000 ಗಳಿಗೆ ಪಡೆದುಕೊಂಡಿರುತ್ತಾರೆ.

ದೂರುದಾರರು ರಮೇಶ ಎಲೆಕ್ಟಿಕಲ್ಸ್ ಅಂಗಡಿಯ ಮಾಲೀಕರಾಗಿದ್ದು, ದೂರುದಾರರು ಎದುರುದಾರನೊಂದಿಗೆ ಪ್ರಮಾಣಿತ ಅಗ್ನಿ ಮತ್ತು ವಿಶೇಷ ಅಪಾಯಗಳ ಪಾಲಸಿಯ ಅಡಿಯಲ್ಲಿ ವಿಮೆ ಮಾಡಿಸಿರುತ್ತಾರೆ.

ದಿನಾಂಕ 05-04-2023 ರಂದು ಬೆಳಿಗ್ಗೆ ಸುಮಾರು 4 ಗಂಟೆಗೆ ದೂರುದಾರರ ಅಂಗಡಿಯ ಪಕ್ಕದಲ್ಲಿ ಎಂ.ಶಭೀರ್ ಸಾಬ್ ಎಂಬುವವರ ಕೋಲ್ಡ್ ಸ್ಟೋರೇಜ್‌ನಲ್ಲಿ ಅಗ್ನಿ ಅವಘಡ ಸಂಭವಿಸಿದ್ದು, ಈ ಅಗ್ನಿ ಅಪಘಾತದಿಂದ ದೂರುದಾರರ ಅಂಗಡಿ ಮತ್ತು ಮನೆಗೆ ಬೆಂಕಿ ಹರಡಿದೆ. ಇದರಿಂದ ದೂರುದಾರರ ಅಂಗಡಿ ಮತ್ತು ವಾಸಿಸುವ ಮನೆಯ ಕಿಟಕಿ, ಬಾಗಿಲು, ಗೃಹ ಬಳಕೆಯ ಸಾಮಾಗ್ರಿಗಳು ಸುಟ್ಟು ಭಸ್ಮವಾಗಿದ್ದು, ಈ ಅಗ್ನಿ ಅಪಘಾತದ ವಿಷಯವನ್ನು ಅಗ್ನಿ ಶಾಮಕ ದಳ ಇವರಿಗೆ ತಿಳಿಸಲಾಗಿ, ತಕ್ಷಣವೇ ಅಗ್ನಿ ಶಾಮಕ ದಳದವರು ಸ್ಥಳಕ್ಕೆ ಆಗಮಿಸಿ ಬೆಂಕಿಯನ್ನು ನಂದಿಸಿರುತ್ತಾರೆ. ಈ ಘಟನೆಯಿಂದ ದೂರುದಾರರಿಗೆ ಅಪಾರ ನಷ್ಟ ಸಂಭವಿಸಿರುತ್ತದೆಂದು ತಿಳಿಸಿರುತ್ತಾರೆ.

ದೂರುದಾರರಿಗೆ ಅಗ್ನಿ ಅಪಘಾತದಿಂದ ಸುಮಾರು ರೂ. 14,50,000 ನಷ್ಟ ಉಂಟಾಗಿರುತ್ತದೆಂದು ದೂರುದಾರರು ಎದುರುದಾರರ ಕಂಪನಿಗೆ ತಿಳಿಸಿರುತ್ತಾರೆ. ಎದುರುದಾರ ಕಂಪನಿಯವರ ಸರ್ವೇಯರ್ ದೂರುದಾರರಿಗೆ ಉಂಟಾದ ನಷ್ಟವನ್ನು ಅಂದಾಜು ಮಾಡಿ ವರದಿಯನ್ನು ಸಲ್ಲಿಸಿರುತ್ತಾರೆ. ದೂರುದಾರರು ಎದುರುದಾರರ ಕಂಪನಿಯಲ್ಲಿ ನಷ್ಟ ಪರಿಹಾರ ಕೋರಿ ಸೂಕ್ತ ದಾಖಲಾತಿಗಳೊಂದಿಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಎದುರುದಾರ ವಿಮಾ ಕಂಪನಿ ದೂರುದಾರರಿಗೆ ಉಂಟಾದ ನಷ್ಟಕ್ಕೆ ಅತೀ ಕಡಿಮೆ ಪರಿಹಾರ ರೂ. 34,125 ಗಳನ್ನು ನೀಡಿರುತ್ತಾರೆ. ಅದನ್ನು ಒಪ್ಪದ ದೂರುದಾರರು ತನಗೆ ಉಂಟಾದ ಹೆಚ್ಚುವರಿ ನಷ್ಟಕ್ಕೆ ಪರಿಹಾರವನ್ನು ಕೋರಿ ಎದುರುದಾರರ ವಿರುದ್ಧ ದೂರನ್ನು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರಕ್ಕೆ ಸಲ್ಲಿಸಿರುತ್ತಾರೆ.

ಎದುರುದಾರರು ಪ್ರಕರಣದಲ್ಲಿ ಹಾಜರಾಗಿ ದೂರಿನಲ್ಲಿನ ಆರೋಪಗಳನ್ನು ಅಲ್ಲಗಳೆಯುತ್ತಾ, ವಸತಿ ಉದ್ದೇಶಕ್ಕಾಗಿ ಪಾಲಸಿ ನೀಡಿದ ಕಾರಣ ವ್ಯಾವಹಾರಿಕ ಉದ್ದೇಶದ ಕಟ್ಟಡದ ನಷ್ಟಕ್ಕಾಗಿ ಪಾಲಸಿ ಮೊತ್ತ ಪಡೆಯಲು ಅರ್ಹರಿಲ್ಲವೆಂದು ತಕರಾರು ಸಲ್ಲಿಸಿರುತ್ತಾರೆ.

ದೂರನ್ನು ದಾಖಲಿಸಿದ ನಂತರ ಕೊಪ್ಪಳ ಜಿಲ್ಲಾ ಆಯೋಗದ ಅಧ್ಯಕ್ಷರಾದ ಶ್ರೀಮತಿ ಜಿ.ಇ.ಸೌಭಾಗ್ಯಲಕ್ಷ್ಮೀ ಹಾಗೂ ಸದಸ್ಯರಾದ ರಾಜು.ಎನ್.ಮೇತ್ರಿ ರವರು ಎರಡು ಪಕ್ಷಕಾರರ ವಾದ ಪ್ರತಿವಾದಗಳನ್ನು ಆಲಿಸಿ, ದೂರುದಾರರಿಗೆ ಅಗ್ನಿ ಅವಘಡದಿಂದ ಉಂಟಾದ ನಷ್ಟವನ್ನು ಎದುರುದಾರರ ಕಂಪನಿಯವರು ನೀಡದಿರುವುದು ಸೇವಾ ನ್ಯೂನತೆ ಎಂದು ಪರಿಗಣಿಸಿ ಸಾಬೀತಾಗಿರುವುದರಿಂದ ದೂರನ್ನು ಭಾಗಶ: ಪುರಸ್ಕರಿಸಿ ದೂರುದಾರರಿಗೆ ಎದುರುದಾರರು ರೂ. 4,38,000 ಗಳು ಪರಿಹಾರವನ್ನು ದೂರಿನ ದಿನಾಂಕದಿಂದ ಪಾವತಿಯಾಗುವವರೆಗೆ ವಾರ್ಷಿಕ ಶೇ 6ರ ಬಡ್ಡಿ ಸಮೇತ ನೀಡುವಂತೆ, ಮಾನಸಿಕ ಯಾತನೆಗಾಗಿ ರೂ.10,000 ಗಳನ್ನು ಹಾಗೂ ದೂರಿನ ಖರ್ಚು ರೂ.5,000/-ಗಳನ್ನು ಈ ಆದೇಶದ ದಿನಾಂಕದಿಂದ 45 ದಿನಗಳ ಒಳಗಾಗಿ ಪಾವತಿಸುವಂತೆ ಆದೇಶವನ್ನು ನೀಡಿರುತ್ತಾರೆ ಎಂದು ಕೊಪ್ಪಳ ಜಿಲ್ಲಾ ಗ್ರಾಹಕರ ಆಯೋಗದ ಸಹಾಯಕ ರಿಜಿಸ್ಟ್ರಾರ ಹಾಗೂ ಸಹಾಯಕ ಆಡಳಿತಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪಶ್ಚಿಮ ಬಂಗಾಳದಲ್ಲಿ ಹಿಂದೂಗಳ ಮೇಲೆ ದೌರ್ಜನ: ವಿಹಿಪ ಪ್ರತಿಭಟನೆ

ವಿಜಯನಗರ : ಪಶ್ಚಿಮ ಬಂಗಾಳ ರಾಜ್ಯದಲ್ಲಿ ಹಿಂದೂಗಳ ಮೇಲೆ ನಡೆಯುವ ದೌರ್ಜನ್ಯ ತಡೆಯಬೇಕು.ಹಿಂದೂಗಳ ಮಠ, ಮಂದಿರ, ಆಸ್ತಿಗಳನ್ನು ರಕ್ಷಿಸಲು ಹೊತ್ತಾಯಿಸಿ ಮತ್ತು ಜಮ್ಮು ಕಾಶ್ಮೀರದ ಪುಲ್ವಾಮದಲ್ಲಿ ಉಗ್ರಗಾಮಿಗಳಿಂದನಡೆದ ಹಿಂದೂಗಳ ಹತ್ಯಾಕಾಂಡ ಖಂಡಿಸಿ ಹಾಗೂ ಉಗ್ರರನ್ನು ಸದೆಬಡಿಯಲು ವಿಶ್ವ ಹಿಂದೂ ಪರಿಷತ್ ನೇತ್ರತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.ವಿಜಯನಗರ ಜಿಲ್ಲಾಧಿಕಾರಿ ಕಚೇರಿಗೆ ಆಗ್ರಹಿಸಿ ಮನವಿ ಸಲ್ಲಿಸಿದರು.

ವಕ್ಫ್ ಕಾಯಿದೆ ವಿರೋದಿಸಿ ಪಶ್ಚಿಮ ಬಂಗಾಳ ರಾಜ್ಯದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವಹತ್ಯೆ,ಹಲ್ಯೆ,ದೌರ್ಜನ್ಯವನ್ನು ತಡೆಯಬೇಕು. ಅನ್ಯಾಯವಾದವರಿಗೆ ನ್ಯಾಯಹೊದಗಿಸಬೇಕು.ಮತ್ತುಹಿಂದೂಗಳ ಮಠ, ಮಂದಿರ, ಆಸ್ತಿಗಳನ್ನು ರಕ್ಷಿಸಬೇಕು. ಮುಂದಿನ ದಿನಗಳಲ್ಲಿ ಹಿಂದೂಗಳಿಗೆ ಯಾವುದೇರೀತಿಯ ಅನ್ಯಯವಾಗದಂತೆ ನೋಡಿಕೊಳ್ಳಲು ಆಗ್ರಹಿಸುತ್ತಿದ್ದೇವೆ.

ಜಮ್ಮು- ಕಾಶ್ಮೀರದ ಸುಂದರ ಪ್ರವಾಸಿ ತಾಣ




ಪಹಲ್ಗಾಮ್‌ನಲ್ಲಿ ಪಾಕಿಸ್ತಾನ ಪೋಷಿತ ಉಗ್ರರು ಹಿಂದೂಗಳನ್ನೆ ಗುರಿಯಾಗಿರಿಸಿಕೊಂಡು ಧರ್ಮಕೆಳಿ ಹಿಂದೂಗಳನ್ನೇಗುಂಡುಹಾರಿಸಿ ಹತ್ಯೆಮಡಿರುವುದು ಖಂಡನೀಯ. ನಮ್ಮ ಸಂಘಟನೆ ಈ ದುಷ್ ಕೃತ್ಯವನ್ನು ಸಹಿಸುವುದಿಲ್ಲ. ಈಗಾಗಲೆ ಕೇಂದ್ರ ಸರ್ಕಾರ ರಾಜತಾಂತ್ರಿಕವಾಗಿ ಪಾಕಿಸ್ತಾನಕ್ಕೆ ಪೆಟ್ಟು ನೀಡಿದೆ. ಅದು ಸ್ವಾಗತಾರ್ಹ. ಆದರೆ ದುಷ್ಟ ಉಗ್ರರನ್ನು ಶಿಕ್ಷಿಸುವುದು ಅತೀಅವಶ್ಯವಿದೆ. ಉಗ್ರರಿಗೆ ತಕ್ಕಶಿಕ್ಷೆ ನೀಡದಿದ್ದಲ್ಲಿ ಮತ್ತೆ ಈತರಹದ ಘಟನೆಗಳು ಸಂಬವಿಸಲಿವೆ. ಭಾರತದಲ್ಲಿ ಉಗ್ರವಾದವನ್ನು ನಿರ್ನಾಮಮಾಡಲು ಹೊತ್ತಾಯಿಸುತ್ತೇವೆ. ವಿಜಯನಗರ ಜಿಲ್ಲೆಯಲ್ಲಿ ಅನದೀಕೃತ ಕಸಾಯಿಕಾನೆಗಳುಕಾರ್ಯನಿರ್ವಹಿಸುತ್ತಿವೆ. ಗೋವುಗಳ ಕಳ್ಳಸಾಗಾಣಿಕೆ ನಡೆಯುತ್ತಿದೆ. ಮತ್ತು ಗೋಮಾಂಸದ ಕಾದ್ಯ ನಂ 10 ಬಿರಿಯಾನಿ ದೊರೆಯುತ್ತದೆ ಎಂದು ನಾಮಪಲಕವಿಟ್ಟು ರಾಜರೋಷವಾಗಿ ಅನದೀಕೃತ ವ್ಯಾಪಾರ ನಡೆಸುತ್ತಿದ್ದಾರೆ. ಮಾನ್ಯಜಿಲ್ಲಾಧಿಕಾರಿಗಳಾದತಾವುಕಾನೂನು ಬಾಹಿರವಾಗಿ ನಡೆಯುವ ಚಟುವಟಿಕೆಗೆ ತಡೆನೀಡಬೇಕೆಂದು ಪ್ರಾರ್ಥನ ಮಂದಿರಗಳ ಮೇಲಿನ ಧ್ವನಿವರ್ಧಕಗಳು ಸರ್ವೋಚ್ಚ ನ್ಯಾಯಾಲಯನಿಗದಿಮಾಡಿರುವಶಬ್ದಕ್ಕಿಂತ ಹೆಚ್ಚಿನ ಶಬ್ದವಿಟ್ಟು ಸಾರ್ವಜನಿಕರಿಗೆ ತೊಂದರೆಯುಂಟುಮಾಡುತ್ತಿದ್ದಾರೆ. ಈ ಕರ್ಕಶ ಶಬ್ದದಿಂದ ವೃದ್ಧರಿಗೆ, ಮಕ್ಕಳಿಗೆ, ರೋಗಿಗಳಿಗೆ, ಗರ್ಭಿಣಿ ಸ್ತ್ರೀಯರಿಗೆ ತೊಂದರೆಯಾಗುತ್ತಿದೆ.

ನ್ಯಾಯಾಲಯದ ಆದೇಶ ಪಾಲಿಸಲು ಆಗ್ರಹಿಸಿದರು ಈ ಸಂದರ್ಭದಲ್ಲಿ ಮಾತನಾಡಿದ ಮುಖಂಡರಾದ ಭೂಪಾಳ ಪ್ರಹ್ಲಾದ್, ವಿಜಯಲಕ್ಷ್ಮೀ ಹಿರೇಮಠ,ನರಸಿಂಹಮೂರ್ತಿ,ಶಂಕರ ಮೇಟಿ. ರಮೇಶ್ ಗುಪ್ತಾ, ಕಿರಣ್ ಶಂಕ್ರಿ ಇತರರು ಮಾತನಾಡಿ,ರೇವಣಸಿದ್ದಪ್ಪ. ತಿಪ್ಪೇಸ್ವಾಮಿ ಕಿಚಿಡಿ.ಪ್ರಕಾಶ್.ಆನಂದ್. ಕೃಷ್ಣ ಎಲ್ಲ ಸಮಾಜದ ಮುಖಂಡರು ಉಪಸ್ಥಿತರಿದ್ದರು.

# ನವ ನಿರ್ಮಾಣ ಸೇನೆಗೆ ತಾಲೂಕ ಅಧ್ಯಕ್ಷರಾಗಿ ಮಹೇಶ್ ಅಲ್ಲಾನಗರ ನೇಮಕ

**ಕೊಪ್ಪಳ :** ಕರ್ನಾಟಕ ನವ ನಿರ್ಮಾಣ ಸೇನೆಗೆ ಕೊಪ್ಪಳ ತಾಲೂಕ ಅಧ್ಯಕ್ಷರಾಗಿ ತಾಲೂಕಿನ ಅಲ್ಲಾನಗರ ಗ್ರಾಮದ ನಿವಾಸಿ ಮಹೇಶ್ ಅಲ್ಲಾನಗರ ನೇಮಕಗೊಂಡಿದ್ದಾರೆ, ತಾಲೂಕಿನಲ್ಲಿ ಸೇನೆಯ ಸಂಘಟನೆ ಬೆಳೆಸಿ ಸಾಮಾನ್ಯ ಜನರ ನ್ಯಾಯ ಸಮ್ಮತ ಬೇಡಿಕೆಗಳ ಈಡೇರಿಕೆಗಾಗಿ ಶ್ರಮಿಸುವಂತೆ ಕರ್ನಾಟಕ ನವ ನಿರ್ಮಾಣ ಸೇನೆಯ ರಾಜ್ಯ ಸಂಚಾಲಕರು ಹಾಗೂ ಕೊಪ್ಪಳ ಜಿಲ್ಲಾ ಅಧ್ಯಕ್ಷರಾದ ವಿಜಯಕುಮಾರ್ ಕವಲೂರು ರವರು ನೇಮಕ ಮಾಡಿ ಆದೇಶ ಹೊರಡಿಸಿ ತಾಲೂಕಿನಲ್ಲಿ ಸಂಘಟನೆ ಬೆಳೆಸುವಂತೆ ಸೂಚನೆ ನೀಡಿದ್ದಾರೆ,

ನವ ನಿರ್ಮಾಣ ಸೇನೆಗೆ ತಾಲೂಕ್ ಅಧ್ಯಕ್ಷರಾಗಿ ನೇಮಕಗೊಂಡ ಮಹೇಶ್ ಅಲ್ಲನಗರರವರ ಸ್ನೇಹಿತರ ಬಳಗ ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ. ಅಲ್ಲದೆ ತಮಗೆ ನೇಮಕ ಮಾಡಿ ಕಾರ್ಯನಿರ್ವಹಿಸಲು ಅವಕಾಶ ನೀಡಿರುವುದಕ್ಕೆ ಮಹೇಶ್ ಅಲ್ಲಾನಗರವರು ಅಭಿನಂದಿಸಿ ತನಗೆ ನೀಡಿರುವ ಜವಾಬ್ದಾರಿ ಪ್ರಾಮಾಣಿಕವಾಗಿ ನಿಭಾಯಿಸುವುದಾಗಿ ಅವರು ತಿಳಿಸಿದ್ದಾರೆ.

# ಪೈಶ್ಯಾಚಿಕ ಕೃತ್ಯಕ್ಕೆ ತಕ್ಕ ಉತ್ತರ ನೀಡಲಿ: ಗುಂಡಕನಾಳಶ್ರೀ

**ತಾಳಿಕೋಟೆ :** ಭಾರತಮಾತೆ ಕಿರೀಟವಾದ ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಘಟನೆ ತುಂಬಾ ಅಮಾನವೀಯ ಮತ್ತು ಹಿಂಸಾತ್ಮಕವಾದಂತ ಘಟನೆ ಈ ಘಟನೆಯಿಂದ ಹಿಂದುಗಳು ಎಚ್ಚೆತ್ತುಕೊಳ್ಳಬೇಕು ಮತ್ತು ಒಗ್ಗಟ್ಟಾಗಬೇಕು.

ಹಿಂದುಗಳನ್ನ ಗುರುತಿಸಿ ಅವರನ್ನು ಗುಂಡಿಕ್ಕಿ ಕೊಲ್ಲುವಂಥ ಹೀನ ಕೃತ್ಯ ಕಾಶ್ಮೀರದಲ್ಲಿ ನಡೆದಿದೆ ಎಂದು ಗುಂಡಕನಾಳ ಹಿರೇಮಠದ ಶ್ರೀ ಷ.ಬ್ರ. ಗುರುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದ್ದಾರೆ.

ಪತ್ರಿಕಾ ಪ್ರಕಟನೆ ನೀಡಿರುವ ಅವರು ಹಿಂದುಗಳಾದ ನಾವುಗಳು ಏಚ್ಚೆತ್ತುಕೊಂಡು ಒಂದಾಗಿ ಹೆಜ್ಜೆ ಇಡದಿದ್ದರೆ ಮುಂದಿನ ದಿನಮಾನದಲ್ಲಿ ಹಿಂದೂ ಧರ್ಮಕ್ಕೆ ಅಪಾಯವಿದೆ ಭಾರತೀಯರಾದ ನಾವುಗಳು ಇಂತಹ ಸಂದರ್ಬದಲ್ಲಿ ಹೀನ ಕೃತ್ಯವೆಸಗಿದ ಭಯೋತ್ಪಾದಕರನ್ನು ಸಂಪೂರ್ಣ ನಿರ್ನಾಮ ಮಾಡಲು ಕೇಂದ್ರ ಸರ್ಕಾರದ ಜೊತೆಗೆ ನಿಲ್ಲಬೇಕಿದೆ ಹಿಂದುಗಳಿಗೆ ಇರೋದು ಒಂದೇ ದೇಶ ಅದು ಭಾರತ ದೇಶ ಭಾರತ ದೇಶ ಎಲ್ಲರೂ ಜಾತಿ, ಮತ ಪಂಥವನ್ನು ಬದಿಗೊತ್ತಿ ಒಂದಾಗಿ ನಿಲ್ಲಬೇಕಿದೆ ಘಟನೆಯಲ್ಲಿ ಮೃತಪಟ್ಟವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತ ದುಃಖ ಬರಿತ ಕುಟುಂಬಸ್ಥರಿಗೆ ದುಃಖ ಬರಿಸಿಕೊಳ್ಳುವ ಶಕ್ತಿ ದಯಪಾಲಿಸಲಿ ಎಂದು ದಯಾಘನ ಭಗವಂತನಲ್ಲಿ ಪ್ರಾರ್ಥಿಸುತ್ತೇವೆಂದು ಗುಂಡಕನಾಳ ಹಿರೇಮಠದ ಶ್ರೀ ಗುರುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ತಿಳಿಸಿದ್ದಾರೆ.

ನಮ್ಮ ದೇಶದ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿಜಿ ಅವರು ತಕ್ಷಣ ಪಾಕಿಸ್ತಾನ ದೇಶದ ವೀಸಾ ರದ್ದು ಮಾಡಿರುವುದು ಹಾಗೂ ಪಾಕಿಸ್ತಾನ ದೇಶದ ಪ್ರಜೆಗಳನ್ನು ದೇಶದಿಂದ ಹೊರಗೆ ಹಾಕುವಂತ ನಿರ್ಧಾರಗಳು ತುಂಬಾ ಸ್ವಾಗತರ್ಹವಾದ ವಿಚಾರವಾಗಿದೆ ಉಗ್ರರ ಪೈಶ್ಯಾಚಿಕ ಕೃತ್ಯಕ್ಕೆ ಅವರ ಹೆಡೆಮುರಿ ಕಟ್ಟುವಂತಹ ಕೆಲಸ ನಮ್ಮ ಭಾರತೀಯ ಸೈನ್ಯ ಮಾಡಲಿದೆ ಪ್ರಧಾನಿ ನರೇಂದ್ರ ಮೋದಿಜಿ ಅವರು ದಿಟ್ಟ ನಿರ್ಧಾರ ಕೈಗೊಳ್ಳಲಿದ್ದಾರೆಂದು ಅವರು ತಿಳಿಸಿದ್ದಾರೆ.

# ಹಿಂದೂಗಳು ಒಗ್ಗಟ್ಟಾದಾಗ ಸದೃಡ ಭಾರತ ಕಟ್ಟಲು ಸಾಧ್ಯ: ದೇಶಪಾಂಡೆ

**ತಾಳಿಕೋಟೆ :** ಕಾಶ್ಮೀರದ ಪಹಲ್ಗಾಮ್‌ನಲ್ಲಿ ಹಿಂದೂ ಧರ್ಮಿಯರನ್ನೇ ಟಾರ್ಗೇಟ್ ಮಾಡುವದರೊಂದಿಗೆ ರಣಹೇಡಿ ಉಗ್ರರು ನಡೆಸಿದ ಪೇಶಾಚಿಕ ಕೃತ್ಯಕ್ಕೆ ತಕ್ಕ ಉತ್ತರ ನೀಡಲು ಹಿಂದೂಗಳೇಲ್ಲರೂ ಒಗ್ಗಟ್ಟಾಗಿ ಮುನ್ನಡೆಯಬೇಕಾಗಿದೆ ಎಂದು ಆರ್.ಎಸ್.ಎಸ್.ಹಿರಿಯ ಸ್ವಯಂ ಸೇವಕ ಸುದೀರ ದೇಶಪಾಂಡೆ ಅವರು ಹೇಳಿದರು.

ಕಾಶ್ಮೀರದ ಅನಂತನಾಗ್ ಜಿಲ್ಲೆಯ ಪಹಲ್ಗಾಮ್ ಪ್ರದೇಶದಲ್ಲಿ ಪ್ರವಾಸಿಗರ ಮೇಲೆ ನಡೆದ ಉಗ್ರರ ಹೀನ ಕೃತ್ಯ ಖಂಡಿಸಿ ಬುಧವಾರರಂದು ಪಟ್ಟಣದಲ್ಲಿ ಸಮಸ್ತ ಹಿಂದೂ ಬಾಂದವರ ನೇತೃತ್ವದಲ್ಲಿ ಉಗ್ರರ ಗುಂಡಿಗೆ ಬಲಿಯಾದ ಹುತಾತ್ಮ ಹಿಂದೂ ಬಾಂದವರಿಗೆ ಭಾವಪೂರ್ಣ ಶ್ರದ್ದಾಂಜಲಿ ಸಲ್ಲಿಸುವ ಸಲುವಾಗಿ ಏರ್ಪಡಿಸಲಾದ ಪಂಜಿನ ಮೇರವಣಿಗೆಯ ನೇತೃತ್ವವಹಿಸಿ ಮಾತನಾಡುತ್ತಿದ್ದ ಅವರು ಹಿಂದೂಗಳಿಗೆ ಇರುವದು ಅದು ಒಂದೇ ದೇಶ ಅದು ಭಾರತ ದೇಶವಾಗಿದೆ ಕಾಶ್ಮೀರ ಕಣಿವೆಯಲ್ಲಿ ಉಗ್ರರ ಉಪಟಳ ಈ 10 ವರ್ಷಗಳಲ್ಲಿ ಕಡಿಮೆಯಾಗಿತ್ತು ಎನ್ನುವಷ್ಟರಲ್ಲಿಯೇ ನುಸುಳುಕೋರ ರಣಹೇಡಿ ಉಗ್ರರು ಕಾಶ್ಮೀರದ ಅಲ್ಲಿಯ ಕೆಲವು ಜನರ ಸಹಾಯವನ್ನು ಪಡೆದು ಹಿಂದೂಗಳನ್ನೇ



ಟಾರ್ಗೇಟ್ ಮಾಡಿ ಖಚಿತ ಪಡಿಸಿಕೊಂಡು 25 ಕ್ಕೂ ಹೆಚ್ಚು ಜನರನ್ನು ಹತ್ಯ ಮಾಡಿದ್ದಾರೆ ಇದು ಇಡೀ ಭಾರತ ದೇಶವನ್ನೇ ಬೆಚ್ಚಿ ಬಿಳಿಸುವಂತೆ ಮಾಡಿದೆ ಇಂತಹ ರಣಹೇಡಿ ಉಗ್ರರ ಹೆಡೆಮೂರಿ ಕಟ್ಟಲು ನಮ್ಮ ಭಾರತದ ಸೈನ್ಯ ಸಜ್ಜಾಗಿ ಕೆಲಸ ಮಾಡುತ್ತಿದೆ ನಮ್ಮ ಭಾರತದ ಸೈನ್ಯಕ್ಕೆ ನಮ್ಮ ಭಾರತದ ಪ್ರಧಾನಿಗೆ ನಾವು ಹಿಂದೂಗಳೆಲ್ಲರೂ ಒಗ್ಗಟ್ಟಾಗಿದ್ದೇವೆ ಇಂತಹ ಹೀನ ಕೃತ್ಯ ನಡೆಸುವ ಉಗ್ರಗಾಮಿಗಳನ್ನು ಬುಡ ಸಮೇತ ಕಿತ್ತೇಸೆಯಬೇಕೆಂದು ಸಂದೇಶ ನೀಡಬೇಕಿದೆ ಪಾಪಿ ಪಾಕಿಸ್ತಾನಕ್ಕೆ ಬುದ್ದಿ ಕಲಿಸುವ ದಿನಗಳ ದೂರ ಉಳಿದಿಲ್ಲಾ ನಾವೆಲ್ಲರೂ ಒಂದು ನಾವೆಲ್ಲರೂ ಹಿಂದೂ ನಾವೆಲ್ಲರೂ ಬಂದು ಎಂಬುದನ್ನು ತೋರಿಸಿಕೊಡಬೇಕಾಗಿದೆ ಎಂದ ಅವರು ಕಾಶ್ಮೀರದ ಈ ಘಟನೆಗೆ ಭಲವಾಗಿ ದೇಶದ ಜನರು ಖಂಡಿಸಬೇಕಾಗಿದೆ ಎಂದರು.

ಪಂಜಿನ ಮೇರವಣಿಗೆಗೆ ಚಾಲನೆ ನೀಡಿದ ಶ್ರೀ ಖಾಸ್ಗತೇಶ್ವರ ಮಠದ ಬಾಲ ಶಿವಯೋಗಿ ಶ್ರೀ ಸಿದ್ದಲಿಂಗ ದೇವರು ಮಾತನಾಡಿ ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಘಟನೆ ದೇಶದ ಎಲ್ಲರಿಗೂ ದಿಗ್ಬ್ರಮೆ ಮೂಡಿದೆ ಇದಕ್ಕೆ ಪ್ರತಿಕಾರ ಉಗ್ರವಾದಿಗಳನ್ನು ಬುಡ ಸಮೇತ ಕಿತ್ತೇಸೆವುದು ಆಗಿದೆ ಈಗಾಗಲೇ ನಮ್ಮ ಭಾರತೀಯ ಸೈನ್ಯ ಆ ಕೆಲಸದಲ್ಲಿ ತೊಡಗಿದ್ದು ನಾವೆಲ್ಲ ಭಾರತೀಯರು ಒಂದಾಗಿ ನಿಮ್ಮ ಜೊತೆ ಇದ್ದೇವೆ ಎಂಬ ಸಂದೇಶಕ್ಕಾಗಿ ಈ ಪಂಜಿನ ಮೇರವಣಿಗೆಯು ದೇಶಾದ್ಯಂತ ಎಲ್ಲರೂ ಒಗ್ಗಾಟಾಗಿ ಮಾಡಲಾಗುತ್ತಿದೆ ಈ ಘಟನೆಯಲ್ಲಿ ಬಲಿಯಾದ ಕುಟುಂಭಗಳಿಗೆ ಎಲ್ಲರು ಸೇರಿ ಶ್ರದ್ದಾಂಜಲಿ ಸಲ್ಲಿಸೋಣವೆಂದರು.

ಪಟ್ಟಣದ ಶ್ರೀ ಅಂಬಾಭವಾನಿ ಮಂದಿರದಿಂದ ಪ್ರಾರಂಭಗೊಂಡ ಈ ಪಂಜಿನ ಮೇರವಣಿಗೆಯು ಕತ್ರಿ ಭಜಾರ ಮಾರ್ಗವಾಗಿ ಬಾಲಾಜಿ ಮಂದಿರ ರಸ್ತೆ, ಶ್ರೀ ವಿಠ್ಠಲಮಂದಿರ ರಸ್ತೆ, ಶಿವಾಜಿ ಮಹಾರಾಜರ ವೃತ್ತ, ಮಹಾರಾಣಾಪ್ರತಾಪಸಿಂಹ ವೃತ್ತ, ಬಸ್ ನಿಲ್ದಾಣದ ಮುಂಭಾಗದ ರಸ್ತೆಗುಂಟಾ ಹಾಯ್ದು ಶ್ರೀ ಬಸವೇಶ್ವರ ವೃತ್ತಕ್ಕೆ ತೆರಳಿ ಅಲ್ಲಿ ಮೇಣದ ಬತ್ತಿಗಳನ್ನು ಹಚ್ಚುವದರೊಂದಿಗೆ ಕಾಶ್ಮೀರದ ಪಹಲ್ಗಾಮ್‌ಗೆ ಪ್ರವಾಸಕ್ಕೆ ತೆರಳಿ ಬಲಿಯಾದ ಎಲ್ಲ ಹಿಂದೂಗಳಿಗೆ ಶ್ರದ್ದಾಂಜಲಿ ಸಲ್ಲಿಸಲಾಯಿತು. ಮೇರವಣಿಗೆಯುದ್ದಕ್ಕೂ ಉಗ್ರರ ವಿರೂದ್ದ ಘೋಷಣೆಗಳನ್ನು ಕೂಗಿದರು.

ಈ ಪಂಜಿನ ಮೇರವಣಿಗೆಯ ನೇತೃತ್ವವನ್ನು ಶ್ರೀ ಶಿವಭವಾನಿ ಮಂದಿರದ ಅರ್ಚಕರಾದ ವೇ.ಸಂತೋಷಬಟ್ ಜೋಶಿ, ವೇ.ಗುಂಡಬಟ್ ಜೋಶಿ, ಒಳಗೊಂಡು ನೂರಾರು ಜನ ಹಿಂದೂ ಸಮಾಜದ ಮುಖಂಡರುಗಳು, ಹಾಗೂ ವಿವಿಧ ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಪಾಲ್ಗೊಂಡಿದ್ದರು.

# ಪೈಶ್ಯಾಚಿಕ ಕೃತ್ಯಕ್ಕೆ ಭಾರತ ಸರ್ಕಾರ ಪ್ರತ್ಯೂತ್ತರ ನೀಡಲಿದೆ: ಕೂಚಬಾಳ

**ತಾಳಿಕೋಟೆ :** ಕಾಶ್ಮೀರದ ಪಹಲ್ಗಾಮ್ ದಲ್ಲಿ ಪ್ರವಾಸಿಗರ ಮೇಲೆ ಹಿಂದೂಗಳೆಂದು ಖಚಿತ ಪಡಿಸಿಕೊಂಡು ಅವರನ್ನು ಹತ್ಯಮಾಡಿರುವ ಉಗ್ರರ ಹೆಡಿಮುರಿ ಕಟ್ಟುವಂತಹ ಕೆಲಸ ಭಾರತ ಸರ್ಕಾರ ಮಾಡಲಿದೆ ದೇಶದ ಪ್ರಧಾನಿಗೆ ನಾವೆಲ್ಲ ಭಾರತೀಯರು ಒಟ್ಟಾಗಿ ನಿಲ್ಲುವಂತಹ ಕೆಲಸ ಮಾಡಬೇಕಿದೆ ಎಂದು ಭಾರತೀಯ ಜನತಾ ಪಕ್ಷದ ಮಾಜಿ ಜಿಲ್ಲಾ ಅಧ್ಯಕ್ಷ ಆರ್.ಎಸ್.ಪಾಟೀಲ (ಕೂಚಬಾಳ) ಅವರು ಹೇಳಿದರು.



ಬುಧವಾರರಂದು ಪತ್ರಿಕೆಯೊಂದಿಗೆ ಮಾತನಾಡಿದ ಅವರು ಉಗ್ರರು ನಡೆಸಿರುವ ಇದೊಂದು ಪಶ್ಯಾಚಿಕ ಕೃತ್ಯವಾಗಿದೆ ಒಂದು ಕುಟುಂಭಕ್ಕೆ ನಿಮ್ಮ ಧರ್ಮಯಾವುದು ಎಂದು ಕೇಳಿ ಹೆಂಡತಿ ಮಕ್ಕಳು ಎದುರಿಗೆ ನಿಲ್ಲಿಸಿ ಹತ್ಯಮಾಡುವಂತಹದ್ದು ಇದು ಇಡೀ ಮನುಕುಲ ಕ್ಷಮಿಸಲಾರದ್ದಂತಹದ್ದಾಗಿದೆ ಇಂತಹ ಕೃತ್ಯ ಭಾರತ ದೇಶ ಎಂದೂ ಸಹಿಸುವದಿಲ್ಲಾ ಭಾರತ ಇಂತಹ ಅನೇಕ ಘಟನಾವಳಿಗಳನ್ನು ಮೇಟ್ಟಿನಿಂತಿದೆ ಸಾಕಷ್ಟು ನೂರಾರು ವರ್ಷಗಳಿಂದ ಸಾವಿರಾರು ವರ್ಷಗಳಿಂದಭಾರತವನ್ನುಆಳಬೇಕೆಂದುಬಂದವರ ಕಡೆಯಿಂದಲೇಸಾದ್ಯವಾಗಿಲ್ಲಾಇಂತಹಸಂದರ್ಬದಲ್ಲಿ ಉಗ್ರರನ್ನು ಪೋಶಿಸುವಂತಹ ಕೆಲಸ ಪಾಕಿಸ್ತಾನ ದೇಶ ಮಾಡಲಿಕ್ಕೆ ಹತ್ತಿದೆ ಜೀಹಾದಿ ಸಂಸ್ಕೃತಿಯನ್ನೇ ಮುಂದುವರೆಸಿಕೊಂಡು ಹೊರಟಿದೆ ಇದಕ್ಕೆ ತಕ್ಕ ಬೆಲೆ ಪಾಕಿಸ್ತಾನ ತೆತ್ತಬೇಕಾಗುತ್ತದೆ ಈ ಹಿಂದೂಗಳನ್ನೇ ಟಾರ್ಗೇಟ್ ಮಾಡಿ ಹತ್ಯಮಾಡಿರುವದಕ್ಕೆ ಪ್ರಧಾನಿ ನರೇಂದ್ರ ಮೋದಿಜಿ ನೇತೃತ್ವದ ಭಾರತ ಸರ್ಕಾರ ಪ್ರತಿಕಾರ ತೀರಸೇ ತೀರಿಸಲಿದೆ ನಮ್ಮ ಭಾರತೀಯ ಸೈನ್ಯ ಎಲ್ಲರೀತಿಯಿಂದಲೂ ಉಗ್ರರನ್ನು ಹೆಡೆಮುರಿ ಕಟ್ಟಲು ಸಜ್ಜಾಗಿ ನಿಂತಿದೆ ಇಂತಹ ಸಂದರ್ಬದಲ್ಲಿ ಭಾರತೀಯರಾದ ನಾವುಗಳು ಒಗ್ಗಟ್ಟಾಗಿ ನಿಲ್ಲಬೇಕಾಗಿದೆ ಎಂದರು.

ಪ್ಯಾಲೇಸ್ತಾನ ದೇಶದೊಳಗೆ ಹಮಾಸ್ ಉಗ್ರರ ಮೇಲೆ ದಾಳಿಯಾಗುತ್ತದೆ ಎಂದುದೇಶದಕೆಲವುಸಂಘಟನೆಗಳು ಇತ್ತೀಚಗೆ ಪ್ರತಿಭಟನೆ ಮಾಡಿದವು ಆದರೆ ಭಾರತ ದೇಶದ ಜನರ ಮೇಲೆ ಉಗ್ರರು ದಾಳಿ ಮಾಡಿ ಹತ್ಯಮಾಡಿದರೂ ಕೂಡಾ ಖಂಡಿಸಿ ಪ್ರತಿಭಟಿಸುವಂತಹ ಕೆಲಸ ಆ ಸಂಘಟನೆಗಳು ಮಾಡದಿರುವದು ನೋವಿನ ಸಂಗತಿಯಾಗಿದೆ ಎಂದ ಕೂಚಬಾಳ ಅವರು ಅದಕ್ಕೆ ಭಾರತವು ಎಲ್ಲವನ್ನು ನೋಡುತ್ತಿದೆ ಪ್ರತಿಯೊಬ್ಬ ಭಾರತೀಯರು ನೋಡುತ್ತಿದ್ದಾರೆ ಪ್ರತಿಯೊಬ್ಬ ಭಾರತೀಯರು ನಾವು ಒಟ್ಟಾಗಿ ನಾವುಗಳು ಭಾರತ ಸರ್ಕಾರದ ಜೊತೆಗೆ ನಾವುಗಳು ಇರುತ್ತೇವೆ ಎಂದ ಅವರು ಹತ್ಯಯಾಗಿರುವ ಕುಟುಂಭಗಳ ಜೊತೆಗೆ ನಾವೆಲ್ಲರೂ ಭಾರತೀಯರು ಇದ್ದೇವೆ ಮೃತರಿಗೆ ಚೀರಶಾಂತಿ ಕೋರುವದರೊಂದಿಗೆ ಕುಟುಂಭದವರಿಗೆ ದೈರ್ಯ ತುಂಬುವಂತಹ ಕೆಲಸ ಭಗವಂತನು ಮಾಡಲಿ ಎಂದು ಆಶಿಸುತ್ತೇನೆಂದ ಅವರು ಭಾರತೀಯರಾದ ನಾವೆಲ್ಲರು ಹಿಂದೂ ನಾವೇಲ್ಲರೂ ಒಂದು ನಾವೆಲ್ಲರೂ ಬಂದು ಎಂಬ ದ್ಯೇಯದೊಂದಿಗೆ ಮುಂದೆ ಸಾಗಬೇಕಿದೆ ಎಂದು ಆರ್.ಎಸ್.ಪಾಟೀಲ(ಕೂಚಬಾಳ) ಅವರು ಹೇಳಿದರು.

# ಅರ್ಜಿ ಆಹ್ವಾನ

**ಬಾಗಲಕೋಟೆ :** ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಗೊಂಡಿರುವ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ), ಸಿದ್ದಾರ್ಥನಗರ, ಮೈಸೂರು ಸಂಸ್ಥೆಯಲ್ಲಿ ಬ್ಯಾಚುಲರ್ ಆಫ್ ವಿಜ್ಯುಯಲ್ ಆರ್ಟ್ಸ್ (ಬಿ.ವಿ.ಎ) [ನಾಲ್ಕು ವರ್ಷದ ಎಂಟು ಸೆಮಿಸ್ಟರ್ ಎನ್.ಇ.ಪಿ. ಪದ್ಧತಿ] ದೃಶ್ಯಕಲೆಯಲ್ಲಿ 2025-26 ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಬಿ.ವಿ.ಎ.ಪದವಿ ಪ್ರವೇಶಾತಿಗಾಗಿ ಆನ್ ಲೈನ್ (ಗಗಅಒಖ) ಮೂಲಕ್ಷು ಅರ್ಜಿ ಅಹ್ವಾನಿಸಲಾಗಿದೆ.

ಈ ಪದವಿಯಲ್ಲಿ 3 ನೇ ಸೆಮಿಸ್ಟರ್‌ನಿಂದ ಚಿತ್ರಕಲೆ, ಶಿಲ್ಪಕಲೆ, ಗ್ರಾಫಿಕ್ಸ್ ಕಲೆ (ಅಚ್ಚುಕಲೆ), ಅನ್ವಯಕಲೆ, ಕಲಾ ಇತಿಹಾಸ ಹಾಗೂ ಛಾಯಾಚಿತ್ರ ಮತ್ತು ಛಾಯಚಿತ್ರ ಪತ್ರಿಕೋದ್ಯಮ ವಿಭಾಗಗಳಲ್ಲಿ ವಿಶೇಷ ಅಧ್ಯಯನದ ಸ್ನಾತಕ ಪದವಿಯಾಗಿರುತ್ತದೆ. ಆಸಕ್ತ ಅಭ್ಯರ್ಥಿಗಳು ಕರ್ನಾಟಕ ಸರ್ಕಾರದ ಅಂತರ್ಜಾಲ ವಿಳಾಸ : htts;// uucms.karnataka.gov.in ಅಥವಾ https:// www.cavamysore.karnataka.gov.in ಅಂತರ್ಜಾಲದ ಮೂಲಕವೇ ಅರ್ಜಿ ಸಲ್ಲಿಸಬೇಕು.

ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಪ್ರವೇಶಾತಿಗಾಗಿ ಅರ್ಹತಾ ಪರೀಕ್ಷೆಯ ದಿನಾಂಕ ಮತ್ತು ಇತರೆ ಮಾಹಿತಿಯನ್ನು ಪ್ರತ್ಯೇಕವಾಗಿ ತಿಳಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕಾರ್ಯಾಲಯದ ಸಹಾಯವಾಣಿಗೆ ಕಛೇರಿ ಸಮಯದಲ್ಲಿ 0821-2438931 ಯನ್ನು ಸಂಪರ್ಕಿಸಬಹುದು ಎಂದು ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ) ಡೀನ್ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

# ಕಾಶ್ಮೀರ ಉಗ್ರರ ದುಷ್ಕೃತ್ಯಕ್ಕೆ ಕಾಶಿ ಜಗದ್ಗುರುಗಳ ಖಂಡನೆ

**ವಾರಾಣಾಸಿ(ಉ.ಪ್ರ.) :** ದಕ್ಷಿಣ ಕಾಶ್ಮೀರದ ಅನಂತನಾಗ್ ಜಿಲ್ಲೆಯ ಪಹಲ್ಗಾಮದಲ್ಲಿ ಸುಮಾರು 26 ಅಮಾಯಕ ಭಾರತೀಯರ ಮೇಲೆ ಭಯೋತ್ಪಾದನಾ ಗುಂಡಿನ ದಾಳಿ ನಡೆಸಿರುವ ಉಗ್ರರ ದುಷ್ಕೃತ್ಯವನ್ನು ವೀರಶೈವ ಧರ್ಮದ ಪಂಚಪೀಠಗಳಲ್ಲಿ ಒಂದಾಗಿರುವ ಕಾಶಿ ಜ್ಞಾನ ಪೀಠದ ಹಿರಿಯ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ತೀವ್ರವಾಗಿ ಖಂಡಿಸಿದ್ದಾರೆ.

ಪ್ರವಾಸಕ್ಕೆಂದು ತೆರಳಿರುವ ಮುಗ್ಧ ಜನರ ಜಾತಿ-ಧರ್ಮಗಳನ್ನು ಕೇಳಿ ಕೇಳಿ ಗುಂಡಿನ ದಾಳಿ ನಡೆಸಿ ಹತ್ಯೆಗೈದಿರುವುದು ಅತ್ಯಂತ ಹೀನ ಪೈಶಾಚಿಕ ಕೃತ್ಯವಾಗಿದ್ದು, ಇದೊಂದು ಬಹುದೊಡ್ಡ ಅಕ್ಷಮ್ಯ ಅಪರಾಧವಾಗಿದೆ. ಈ ದಾಳಿಯು ಎಷ್ಟೋ ಜನರ ಬದುಕನ್ನೇ ಕಸಿದುಕೊಂಡಿದೆ. ನಮ್ಮ ವಿವಾಹಿತ ಸಹೋದರಿಯರು ತಮ್ಮ ಪತಿಯನ್ನು ಕಳೆದುಕೊಂಡು ದಿಕ್ಕು ತೋಚದೇ ಕತ್ತಲೆಯಿಂದ ಸುತ್ತುವರೆದಿದ್ದಾರೆ ಎಂದಿದ್ದಾರೆ.

ವಿಶ್ವದೆಲ್ಲೆಡೆ ಚಿಂತನೆ ಅಗತ್ಯ: ಮನುಕುಲದ



ಬದುಕನ್ನು ಹೊಸಕಿ ಹಾಕುವ ಹೇಯ ಕೃತ್ಯವಾದ ಭಯೋತ್ಪಾದನೆಯನ್ನು ಮತ್ತು ಉಗ್ರವಾದಿಗಳ ಕುಕೃತ್ಯಗಳನ್ನು ಮಟ್ಟಹಾಕುವಲ್ಲಿ ವಿಶ್ವದೆಲ್ಲೆಡೆ ವ್ಯಾಪಕ ಚಿಂತನೆ ನಡೆಯುವ ಅಗತ್ಯವಿದೆ. ಭಯೋತ್ಪಾದನೆಯನ್ನು ಸಂಪೂರ್ಣ ಮುಕ್ತಗೊಳಿಸುವಲ್ಲಿ ಜಗತ್ತಿನ ಎಲ್ಲಾ ರಾಷ್ಟ್ರಗಳು ಕೈಜೋಡಿಸಬೇಕು. ಉಗ್ರರ ನಿರ್ಮೂಲನೆಗೆ ಭಾರತ ಸರಕಾರ ಕೈಕೊಳ್ಳುವ ಎಲ್ಲಾ ಬಿಗಿಕ್ರಮಗಳಿಗೆ ದೇಶದ ಎಲ್ಲ ರಾಜ್ಯ ಸರಕಾರಗಳು ಪಕ್ಷಭೇದ ಮರೆತು ಒಂದಾಗಿ ಸಹಕಾರ ನೀಡಬೇಕೆಂದು ಹೇಳಿದ್ದಾರೆ.

ಶಾಂತಿ-ಸಹಬಾಳ್ವೆಗೆ ಹೆಸರಾಗಿದ್ದ ದೇವಭೂಮಿ ಭಾರತದ ನೆಲದಲ್ಲಿ ನಡೆದಿರುವ ಉಗ್ರರ ಭಯೋತ್ಪಾದಕ ದಾಳಿಯಿಂದ ವಿಶ್ವದ ವಿದ್ಯಮಾನಗಳಲ್ಲಿ ದೇಶದ ಏಕತೆ ಮತ್ತು ಸಮಗ್ರತೆಯ ವಿಷಯ ಚರ್ಚೆಯ ವಸ್ತುವಾಗಿದೆ. ಈ ಹೃದಯ ವಿದ್ರಾವಕ ಘಟನೆಯಿಂದ ಭಾರತದ ಮೇರು ಆಧ್ಯಾತ್ಮಿಕ ಘನತೆಗೆ ಧಕ್ಕೆ ಉಂಟಾಗಿದೆ ಎಂದು ಕಾಶಿ ಜಗದ್ಗುರುಗಳು ಕಳವಳ ವ್ಯಕ್ತಪಡಿಸಿದ್ದಾರೆ.

**ಸಾಂತ್ವನ ಸಂದೇಶ:** ಕರ್ನಾಟಕದ ಶಿವಮೊಗ್ಗ ಜಿಲ್ಲೆಯ ಮಂಜುನಾಥರಾವ್, ಬೆಂಗಳೂರಿನ ಮದುಸೂದನರಾವ್ ಮತ್ತು ಹಾವೇರಿಯ ಭರತ್ ಭೂಷಣ ಸೇರಿದಂತೆ ಭಯೋತ್ಪಾದಕರ ಗುಂಡಿನ ದಾಳಿಗೆ ಬಲಿಯಾದ ವಿವಿಧ ರಾಜ್ಯಗಳ 26 ಜನರ ಕುಂಟುಂಬಗಳ ಸದಸ್ಯರಿಗೆ ದುಃಖ ಭರಿಸುವ ಶಕ್ತಿಯನ್ನು ಭಗವಂತ ಕರುಣಿಸಲಿ, ಮೃತರ ಆತ್ಮಕ್ಕೆ ಚಿರಶಾಂತಿ ಪ್ರಾಪ್ತಿಯಾಗಲಿ ಎಂದು ಕಾಶಿ ಜ್ಞಾನ ಪೀಠದ ಶ್ರೀಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಸಾಂತ್ವನ-ಸಮಾಧಾನದ ಸಂದೇಶ ಅನುಗ್ರಹಿಸಿದ್ದಾರೆ.

## “ಗಣಿತೋದ್ದಿಪಿನಿ” ಗಣಿತ ಸರಣಿ ಕಾರ್ಯಕ್ರಮ



**ವಿಜಯಪುರ :** ಬಿ.ಎಲ್.ಡಿ.ಇ ಸಂಸ್ಥೆಯ ವಚನ ಪಿತಾಮಹ ಡಾ: ಫ.ಗು.ಹಳಕಟ್ಟಿ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಗಣಿತ ವಿಭಾಗದಿಂದಗಣಿತೋದ್ದಿಪಿನಿ–2025ಕಾರ್ಯಕ್ರಮ ಏರ್ಪಸಲಾಗಿತ್ತು.ಈಕಾರ್ಯಕ್ರಮದಲ್ಲಿಗಣಿತಶಾಸ್ತ್ರದ ಮೂಲಾನ್ವೇಷಣೆ, ಸಂಬದಗ್ನಿಪಿನಿ, (ಮೌಖಿಕ ಮತ್ತು ಮೌಖಿಕವಲ್ಲದ)

ಸಮಯ ಸಾಧಿನಿ (ಲ್ಯಾಟ್ರಲ್ ಚಿಂತನೆ) ಸಖ್ಯೋಜ್ವಾಲೆ (ನಂಬಿಕೆಗಳೊಂದಿಗೆ ಆಟ) ರಸೋತ್ಕರ್ಷ(ರಸಪ್ರಶ್ನೆ) ಶೀಘ್ರವಾಹಿನಿಸ್ಪರ್ಧೆಹಾಗುಇನ್ನಿತರಚಟುವಟಿಕೆಗಳಲ್ಲಿ ದ್ವಿತೀಯ ಸೆಮಿಸ್ಟರ್ ಇಂಜನಿಯರಿಂಗ್ ವಿದ್ಯಾರ್ಥಿಗಳಿಗೆ, ನಾಲ್ಕನೇ ಸೆಮಿಸ್ಟರ್ ವಿದ್ಯಾರ್ಥಿಗಳ ಸಹಯೋಗದೊಂದಿಗೆ ನಡೆಸಿಕೊಡಲಾಯಿತು.

ಮೊದಲ ವರ್ಷದ 119 ವಿದ್ಯಾರ್ಥಿಗಳು ವಿವಿಧ ಹಂತದ ಸೃಜನಶೀಲತೆಯ ಗಣಿತ ಚಟುವಟಿಕೆಗಳಲ್ಲಿ ಭಾವಹಿಸಿದ್ದರು.

ಸಮಾರೋಪ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ನಿವೃತ್ತ ಪ್ರಾಧ್ಯಾಪಕ ಡಾ. ಪಿ.ಕೆ. ಗೊನ್ನಾಗರ ಭಾಗವಹಿಸಿ ವಿದ್ಯಾರ್ಥಿಗಳಿಗೆ ಗಣಿತಶಾಸ್ತ್ರದ ಮಹತ್ವ ಮತ್ತು ಇಂಜಿನೀಯರಿಂಗ ಶಿಕ್ಷಣದಲ್ಲಿ ಗಣಿತ ಉಪಯುಕ್ತತೆ ಬಗ್ಗೆ ಮಾತನಾಡಿದರು. ಕಾರ್ಯಕ್ರಮಕ್ಕೆ ಉಪಪ್ರಾಂಶುಪಾಲರಾದ ಡಾ. ಲೀನಾ ರಾಘಾ ಮತ್ತು ಡಾ. ಪ್ರದೀಪ ಮಾಳಜಿ ಭಾಗವಹಿಸಿ ಅಂತಿಮ ಸುತ್ತಿನಲ್ಲಿ ಆಯ್ಕೆಯಾದ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ಮತ್ತು ಪ್ರಮಾಣಪತ್ರಗಳನ್ನು ವಿತರಿಸಿದರು.

ವಿಭಾಗದ ಮುಖ್ಯಸ್ಥರಾದ ಡಾ. ಎಸ್.ಸಿ.ದೇಸಾಯಿ, ಡಾ. ಅನುರಾಧಾ ಟಂಕಸಾಲಿ ಮತ್ತು ಶಿಕ್ಷಕ ಸಹದ್ಯೋಗಿಗಳು ಉಪಸ್ಥಿತರಿದ್ದರು.

## ಜೆರಿಯಾಟ್ರಿಕ್ ಫಾರ್ಮಾಸ್ಯೂಟಿಕಲ್ ಕೇರ್ ಪ್ರ್ಯಾಕ್ಟೀಸ್ ಕೋರ್ಸ್ ಆರಂಭ



**ವಿಜಯಪುರ :** ಡಿ. ಫಾರ್ಮಾ ಕೋರ್ಸು ಮುಗಿಸಿರುವ ವಿದ್ಯಾರ್ಥಿಗಳಿಗಾಗಿ ಹಿರಿಯ ನಾಗರಿಕರ ವೃದ್ಧಾಪ್ಯ ಕಾಯಿಲೆಗ ಳಗೆ ಔಷಧೋಪಚಾರ ಮತ್ತು ಆರೈಕೆ ಕುರಿತು ತರಬೇತಿ ನೀಡುವ ಹಾಗೂ ದೇಶದಲ್ಲಿಯೇ ಪ್ರಥಮವಾದ ಜೆರಿ ಯಾಟ್ರಿಕ್ ಫಾರ್ಮಾಸ್ಯೂಟಿಕಲ್ ಕೇರ್ ಪ್ರ್ಯಾಕ್ಟೀಸ್ (Geriatric Pharmaceutical Care Practice-GPCP)ಕೋರ್ಸನ್ನುನಗರದ ಬಿ.ಎಲ್.ಡಿ.ಇ ಸಂಸ್ಥೆಯ ಎಸ್. ಎಸ್. ಎಂ. ಔಷಧ ವಿಜ್ಞಾನ ಮಹಾವಿದ್ಯಾಲಯ ಮತ್ತು ಸಂಶೋಧನೆ ಕೇಂದ್ರದಲ್ಲಿ ಪ್ರಾರಂಭಿಸಲಾಗಿದೆ.

ಕಾಲೇಜಿನಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ರಾಷ್ಟ್ರೀಯ ಸಾಮಾಜಿಕ ರಕ್ಷಣಾ ಸಂಸ್ಥೆ, ಸಮಾಜ ನ್ಯಾಯ ಮತ್ತು ಸಬಲೀಕರಣ ಇಲಾಖೆಯ ಹಿರಿಯ ನಾಗರಿಕರ ವಿಭಾಗ, ಎನ್. ಸಿ. ಡಿ. ಎ. ಪಿ ಮತ್ತು ಪಿಎಂಯು ಉಪನಿರ್ದೇಶಕ ಮತ್ತು ಮುಖ್ಯಸ್ಥ ಡಾ. ಎಚ್. ಸಿ. ಶ್ರೀಧರ ಚನ್ನಕೇಶವ ರಂಗಾ ರೆಡ್ಡಿ ವರ್ಚ್ಯೂವಲ್ ಆಗಿ ಉದ್ಘಾಟಿಸಿದರು. ಇತ್ತ ನಗರದಲ್ಲಿ ಫಾರ್ಮಸಿ ಕಾಲೇಜಿನ ನಿರ್ದೇಶಕ ಡಾ. ಆರ್. ಬಿ. ಕೊಟ್ನಾಳ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಹಿರಿಯ ನಾಗರಿಕರ ವಿಭಾಗದ ಮುಖ್ಯಸ್ಥ ಡಾ. ಆನಂದ ಪಿ. ಅಂಬಲಿ, ಹಿರಿಯರ ವೃದ್ಧಾಪ್ಯ ಕಾಯಿಲೆಗಳ ನಿರ್ವಹಣೆ, ಔಷಧೋಪಚಾರ, ಆರೈಕೆ ಹಾಗೂ ಆಪ್ತ ಸಮಾಲೋಚನೆ ಕುರಿತು ಕೋರ್ಸಿನಲ್ಲಿರುವ ವಿಷಯಗಳ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

22ದಿನಗಳಈಹೊಸಕೋರ್ಸ್ಇದಾಗಿದ್ದು, ಡಿ. ಫಾರ್ಮ್ ಪೂರ್ಣಗೊಳಿಸಿದವರು ಇದಕ್ಕೆ ಪ್ರವೇಶ ಪಡೆಯಬಹುದಾಗಿದೆ. ಈ ಕೋರ್ಸು ಡಿ. ಫಾರ್ಮಾ ವಿದ್ಯಾರ್ಥಿಗಳ ಪಠ್ಯದಲ್ಲಿ ಕಲಿಯುವ ವಿಷಯಗಳ ಹೊರತಾದ ವಿಷಯವನ್ನು ಒಳಗೊಂಡಿದೆ. ಹಿರಿಯ ನಾಗರಿಕರಲ್ಲಿ ಎದುರಾಗುವ ವೃದ್ಧಾಪ್ಯದ ಕಾಯಿಲೆಗಳು, ರೋಗಿಗಳ ಮನಸ್ಥಿತಿ, ಅವರಲ್ಲಿ ಔಷಧ ಮತ್ತು ಆಹಾರ ಸೇವನೆ ಬಗ್ಗೆ ನೀಡಬೇಕಿರುವ ತಿಳುವಳಿಕೆ ಹಾಗೂ ನಿರ್ವಹಣೆಯ ಕುರಿತು ವಿದ್ಯಾರ್ಥಿಳಿಗೆ ಸಂಪೂರ್ಣ ಪ್ರಾಯೋಗಿಕ ಮಾಹಿತಿ ಒದಗಿಸುತ್ತದೆ. ಅಲ್ಲದೇ, ಹಿರಿಯ ನಾಗರಿಕರ ಆರೋಗ್ಯಕ್ಕಾಗಿ ಸರಕಾರ ಮತ್ತು ಸ್ವಯಂ ಸೇವಾ ಸಂಸ್ಥೆಗಳು ರೂಪಿಸಿರುವ ಯೋಜನೆಗಳ ಬಗ್ಗೆಯೂ ಕೋರ್ಸಿನ ಅವಧಿಯಲ್ಲಿ ಶಿಕ್ಷಣ ನೀಡಲಾಗುವುದು. ಬಿ.ಎಲ್.ಡಿ.ಇ ಆಸ್ಪತ್ರೆಯಲ್ಲಿ ವೃದ್ಧಾಪ್ಯದ ಕಾಯಿಲೆಗಳ ಚಿಕಿತ್ಸೆ ವಿಭಾಗ ಕಾರ್ಯ ನಿರ್ವಹಿಸುತ್ತಿದೆ. ಮುಂಬರುವ ದಿನಗಳಲ್ಲಿ ಇನ್ನೂ ಅನೇಕ ವಿಷಯಗಲ್ಲಿ ವಿಶೇಷ ತರಬೇತಿ ಆರಂಭಿಸುವ ಉದ್ದೇಶವಿದೆ ಎಂದು ಅವರು ತಿಳಿಸಿದರು.

ಡಾ. ಆರ್. ಬಿ. ಕೊಟ್ನಾಳ ಮಾತನಾಡಿ, ಹಿರಿಯ ನಾಗರಿಕರ ಆರೋಗ್ಯ ಸೇವೆಯಲ್ಲಿ ಔಷಧಶ ತಜ್ಞರು ಸಹಭಾಗಿತ್ವ ಅಗತ್ಯವಾಗಿದ್ದು,ಕಾಲೇಜಿನಲ್ಲಿಈಗಿನಿಂದಲೇ ತರಬೇತಿ ನೀಡುತ್ತಿರುವುದು ಬಹಳ ಉಪಯುಕ್ತವಾಗಿದೆ ಎಂದು ಹೇಳಿದರು.

ವರ್ಚ್ಯೂವಲ್ ಆಗಿ ಕಾರ್ಯಕ್ರಮ ಉದ್ಘಾಟಿಸಿದ ಡಾ. ಎಚ್. ಸಿ. ಶ್ರೀಧರ ರೆಡ್ಡಿ ಮಾತನಾಡಿ, ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಹಿರಿಯ ನಾಗರಿಕರ ಚಿಕಿತ್ಸೆ ವಿಭಾಗ ಮತ್ತು ಫಾರ್ಮಸಿ ಕಾಲೇಜು ದೇಶದಲ್ಲಿಯೇ ಮೊದಲ ಬಾರಿಗೆ ಈ ವಿಶೇಷ ಕೋರ್ಸನ್ನು ಪ್ರಾರಂಭಿಸಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು. ಅಲ್ಲದೇ, ಇದು ಹಿರಿಯ ನಾಗರಿಕರ ಆರೋಗ್ಯದ ಬಗ್ಗೆ ಬಿ.ಎಲ್.ಡಿ.ಇ ಡೀಮ್ಡ್ ವಿವಿ ಹೊಂದಿರುವ ಕಾಳಜಿಗೆ ಸಾಕ್ಷಿಯಾಗಿದೆ ಎಂದು ಅಭಿನಂದನೆ ಸಲ್ಲಿಸಿದರು.

ಜೆರಿಯಾಟ್ರಿಕ್ ಸೊಸೈಟಿ ಆಫ್ ಇಂಡಿಯಾ ಪ್ರಧಾನ ಕಾರ್ಯದರ್ಶಿ ಮತ್ತು ಖ್ಯಾತ ಜೆರಿಯಾಟ್ರಿಷಿಯನ್ ಡಾ. ಓ. ಪಿ. ಶರ್ಮಾ ಮಾತನಾಡಿ, ಜೆರಿಯಾಟ್ರಿಕ್ ಸೊಸೈಟಿ ಆಫ್ ಇಂಡಿಯಾ ಈ ಹೊಸ ಕೋರ್ಸಿಗೆ ಮಾನ್ಯತೆ ನೀಡಿದೆ ಎಂದು ಘೋಷಿಸಿದರು.

ಫಾರ್ಮಸಿ ಕಾಲೇಜಿನ ಪ್ರಾಚಾರ್ಯ ಡಾ ಮಲ್ಲಿಕಾರ್ಜುನ ಶೆಟ್ಟಿ ಮತ್ತು ಫಾರ್ಮಸಿ ಪ್ರ್ಯಾಕ್ಟಿಸ್ ವಿಭಾಗದ ಡಾ. ಎಸ್. ಜೆಡ್. ಇನಾಮದಾರ ಮಾತನಾಡಿದರು.

ಈ ಸಂದರ್ಭದಲ್ಲಿ ಕಾಲೇಜಿನ ಡಾ. ಸುಶೀಲಕುಮಾರ ಪಿ. ಎಲ್., ಡಾ. ಮಲ್ಲಿನಾಥ ವಿ. ಪಿ., ಡಾ. ಸುನಂದಾ ಪಿ. ಎನ್., ಬೋಧಕ ಸಿಬ್ಬಂದಿ, ಡಿ. ಫಾರ್ಮಾ ವಿದ್ಯಾರ್ಥಿಗಳು, ಸಂಶೋಧನೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಕಾಲುಬಾಯಿ ಜ್ವರದ ಲಸಿಕೆ ಅಭಿಯಾನ



**ಬಾದಾಮಿ :** ತಾಲೂಕಿನಾದ್ಯಂತ ಬರುವ ಎ.26 ರಿಂದ ಜೂನ್ 9 ರ ವರೆಗೆ 7 ನೇ ಸುತ್ತಿನ ಕಾಲುಬಾಯಿ ಜ್ವರದ ಲಸಿಕೆ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಾ.ಪಂ.ಇಒ ಸುರೇಶ ಕೊಕ್ಕರೆ ತಿಳಿಸಿದರು.

ಅವರು ನಗರದ ಪಶು ಆಸ್ಪತ್ರೆಯ ಆವರಣದಲ್ಲಿ ಜರುಗಿದ ತಾಲೂಕಾಮಟ್ಟದ ನಿರ್ವಹಣಾ ಸಮಿತಿಯ ಪೂರ್ವಭಾವಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. 20 ನೇ ಜಾನುವಾರು ಗಣತಿ ಪ್ರಕಾರ ತಾಲೂಕಿನಲ್ಲಿ 583 ಬ್ಲಾಕಗಳಿದ್ದು, ದನ 38455 ಹಾಗೂ ಎಮ್ಮೆ 22730 ಸೇರಿದಂತೆ ಒಟ್ಟು 61185 ಜಾನುವಾರುಗಳಿವೆ. ರೈತರು ಪ್ರತಿಯೊಂದು ಜಾನುವಾರುಗಳಿಗೆ ಲಸಿಕೆ ಹಾಕುವ ಮೂಲಕ ಕಾಲು ಮತ್ತು ಬಾಯಿಜ್ವರ ರೋಗದ ನಿರ್ಮೂಲನೆಗೆ ಸಹಕಾರ ನೀಡಬೇಕು ಎಂದು ಮಾಹಿತಿ ನೀಡಿದರು.

ಮುಖ್ಯಪಶುವೈದ್ಯಾಧಿಕಾರಿ ಡಾ.ಶ್ರೀಕಾಂತ ಸಬನೀಸ ಗಣತಿ ಕುರಿತು ಸುವಿವರವಾದ ಮಾಹಿತಿಯನ್ನು ನೀಡಿದರು. ಈ ಸಂದರ್ಭದಲ್ಲಿ ಪಶು ಆಸ್ಪತ್ರೆಯ ವೈದ್ಯಾಧಿಕಾರಿಗಳು, ಸಿಬ್ಬಂದಿಗಳು ಹಾಜರಿದ್ದರು.

## ಕಾಶ್ಮೀರ ಭಯೋತ್ಪಾದಕರ ದಾಳಿ ಎಬಿವಿಪಿ ತೀವ್ರ ಖಂಡನೆ



**ವಿಜಯಪುರ :** ಜಮ್ಮು ಕಾಶ್ಮೀರದಲ್ಲಿ ಪ್ರವಾಸಿಗರ ಮೇಲೆ ನಡೆದಿರುವ ಭಯೋತ್ಪಾದಕರ ದಾಳಿಯನ್ನು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ವತಿಯಿಂದ ಅತ್ಯಂತ ತೀವ್ರವಾಗಿ ಖಂಡಿಸುತ್ತದೆ.

ಈ ಸಂದರ್ಭದಲ್ಲಿ ಮಲ್ಲಿಕಾರ್ಜುನ ಮಾಳಿ ಮಾತನಾಡಿ, ಜಮ್ಮು ಕಾಶ್ಮೀರದ ಪಹಲ್ಗಾಮನಲ್ಲಿ ಪ್ರವಾಸಿಗರ ಮೇಲೆ ನಡೆದಿರುವ ಉಗ್ರರ ಹೇಡಿತನದ ಗುಂಡಿನ ದಾಳಿ ಕೃತ್ಯವನ್ನು ಎಬಿವಿಪಿ ತೀವ್ರವಾಗಿ ಖಂಡಿಸುತ್ತದೆ.

ಜಮ್ಮು ಮತ್ತು ಕಾಶ್ಮೀರ ಭಾರತದ ಅವಿಭಾಜ್ಯ ಅಂಗವೆಂಬುದು ಸಾರ್ವಕಾಲಿಕ ಸತ್ಯ, ಅಲ್ಲಿನ ಪ್ರತ್ಯೇಕವಾದದ ಮನಸ್ಥಿತಿಯನ್ನು ಬದಲಾಯಿಸಲು ಹಾಗೂ ಜನ–ಜೀವನ ಸ್ಥಿತಿಗತಿಗಳನ್ನು ಸ್ಥಿರಗೊಳಿಸಿ ಶಾಂತಿಯುತ ಕಾಶ್ಮೀರವೆಂಬುದನ್ನು

ಖಚಿತಪಡಿಸಿಕೊಳ್ಳಲು ಕೇಂದ್ರ ಸರ್ಕಾರ ಈಗಾಗಲೇ ಸಾಕಷ್ಟು ಕ್ರಮಗಳನ್ನು ತೆಗೆದುಕೊಂಡಿದೆ ಎಂದರು.

ಮಹಾನಗರ ಸಹ ಕಾರ್ಯದರ್ಶಿ ಅಭಿಷೇಕ ಬಡಿಗೇರ ಮಾತನಾಡಿ, ಜಮ್ಮು ಕಾಶ್ಮೀರದಲ್ಲಿ ಕೇಂದ್ರ ಸರಕಾರ ಹಲವಾರು ಭಿಗಿ ಭದ್ರತೆ ಒದಗಿಸಿದರೂ ಸಹ ಭಯೋತ್ಪಾದಕರ ನುಸುಳುಕೋರರ ಹಾವಳಿ ತಡೆಗಟ್ಟಲು ಸಾಧ್ಯವಾಗಿಲ್ಲ.

ಇತ್ತೀಚೆಗೆ ವಲಸೆ ಕಾರ್ಮಿಕರ ಮೇಲಿನ ದಾಳಿಗಳು ಮಾರುಕಟ್ಟೆಗಳಲ್ಲಿ ದಾಳಿಗಳು ಹಾಗೂ ಇಂದು ನಡೆದಿರುವ ಪ್ರವಾಸಿಗರ ಮೇಲಿನ ದಾಳಿ ಗಮನಿಸುವುದಾದರೆ ಕಾಶ್ಮೀರದಶಾಂತಿಮತ್ತುಭಾರತದೊಂದಿಗಿನ ಏಕತೆಗೆಉಗ್ರರುಅರ್ಥಾತ್ಪ್ರತ್ಯೇಕವಾದಿಗಳು ತೀವ್ರ ಸವಾಲುವೊಡ್ಡುತ್ತಿರುವುದು ಕಳವಳಕಾರಿಯದ ಸಂಗತಿಯಾಗಿದೆ. ಆದ್ದರಿಂದ ಕೇಂದ್ರ ಸರ್ಕಾರ ಉಗ್ರದ ವಿರುದ್ಧ ವ್ಯಾಪಕ ಕಠಿಣ ಕ್ರಮಗಳನ್ನು ಕೈಗೊಂಡು ತಕ್ಕ ಉತ್ತರವನ್ನು ನೀಡಬೇಕೆಂದು ವಿದ್ಯಾರ್ಥಿ ಪರಿಷತ್ ಆಗ್ರಹಿಸುತ್ತದೆ. ಭಯೋತ್ಪಾದಕರ ದಾಳಿಯಲ್ಲಿ ತೀವ್ರವಾಗಿ ಗಾಯಗೊಂಡಿರುವವರಿಗೆ ಹಾಗೂ ಹತ್ಯೆಗೊಳಗಾಗಿರುವವರಿಗೆ ವಿದ್ಯಾರ್ಥಿ ಪರಿಷತ್ ಸಂತಾಪವನ್ನು ಸೂಚಿಸುತ್ತದೆ.

ಕರ್ನಾಟಕ ರಾಜ್ಯ ಕಾರ್ಯ ಸಮಿತಿ ಸದಸ್ಯರಾದ ಕುಮಾರಿ ಸುರೇಖಾ ಕುಲಕರ್ಣಿ ಮಾತನಾಡಿ, ಜಮ್ಮು ಕಾಶ್ಮೀರದಲ್ಲಿ ಈಗಾಗಲೇ 371 ರದ್ದಾಗಿ ಶಾಂತಿ ಸಹಬಾಳ್ವೆ ಇದ್ದರೂ ಸಹ ಮೇಲಿಂದ ಮೇಲೆ ಇಂತಹ ದುಷ್ಟ ಕೃತ್ಯ ಎಸಗುತ್ತಿರುವದು ಖಂಡನೀಯ. ಇಂತಹ ಕೃತ್ಯಗಳು ಮರುಕಳಿಸದಿರುವಂತೆ ಇನ್ನಷ್ಟು ಬಿಗಿ ಭದ್ರತೆ ಹಾಗೂ ಪ್ರವಾಸಿ ತಾಣಗಳಿಗೆ ಸೂಕ್ತ ಭದ್ರತೆ ನೀಡುವಂತೆ ಮನವಿ ಮಾಡಿಕೊಂಡರು.

ಈ ಸಂದರ್ಭದಲ್ಲಿ ಸಂದೀಪ ಅರಳಗುಂಡಿ, ಚೇತನ ಕೋರವಾರ, ಪವಿತ್ರಾ, ಸಹನಾ, ಐಶ್ವರ್ಯ, ನೇಸರ ಬಜಂತ್ರಿ, ಸಂಜೀವ, ಕಾರ್ತಿಕ, ಪೂಜನ್ನ, ಸಂದೀಪ, ಚೇತನ, ಸುಮಾರು 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಕೃತ್ಯವನ್ನು ಖಂಡಿಸಿ ಪ್ರತಿಭಟನೆ ಮಾಡಿದರು.

## ಬಸವಾದಿ ಶರಣರ ವೈಭವ ಅನುಭವ ಮಂಟಪಕೆ ಭವ್ಯ ಸ್ವಾಗತ

**ಇಳಕಲ್ :** ಬೆಂಗಳೂರಿನಿಂದ ಇಳಕಲ್ ತಾಲೂಕಿಗೆ ಆಗಮಿಸಿದ ಬಸವಾದಿ ಶರಣರ ವೈಭವ ಅನುಭವ ಮಂಟಪಕೆ ಶುಕ್ರವಾರದಂದು ನಗರದಲ್ಲಿ ಭವ್ಯ ಸ್ವಾಗತ ನೀಡಿ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯನ್ನು ನಡೆಸಲಾಯಿತು.

ವಿಜಯ ಮಹಾಂತೇಶ ಶ್ರೀಮಠದಿಂದ ಆರಂಭವಾದ ಮೆರವಣಿಗೆಯನ್ನು ಶಾಸಕ ವಿಜಯಾನಂದ ಕಾಶಪ್ಪನವರ ಚಾಲನೆ ನೀಡಿದರು. ಸಾನಿಧ್ಯವನ್ನು ಗುರುಮಹಾಂತಶ್ರೀಗಳು ವಹಿಸಿದ್ದರು,

ತಹಸೀಲ್ದಾರ ಸತೀಶ ಕೂಡಲಗಿ, ಗ್ರೇಡ್‌ಟುತಹಸೀಲ್ದಾರಈಶ್ವರಗಡ್ಡಿ ಪೌರಾಯುಕ್ತ ಶ್ರೀನಿವಾಸ ಜಾಧವ, ನಗರಸಭೆ ಅಧ್ಯಕ್ಷೆ ಸುಧಾರಾಣಿ ಸಂಗಮ, ಉಪಾಧ್ಯಕ್ಷೆ ಕಾಳಮ್ಮ ಜಕ್ಕಾ ಸೇರಿದಂತೆ ತಾಲೂಕು ಆಡಳಿತದ ಎಲ್ಲಾ ಸಿಬ್ಬಂದಿ ವರ್ಗದವರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಶ್ರೀಮಠದಿಂದ ಆರಂಭವಾದ ಮೆರವಣಿಗೆ ಗಾಂಧಿ ಚೌಕ, ಗೊರಬಾಳ ನಾಕಾ, ಸೆಂಟ್ರಲ್ ಸ್ಕೂಲ್ , ಕಂಠಿ ಸರ್ಕಲ್ ಬಸ್ ನಿಲ್ದಾಣ , ಮಹಾಂತ ಗಂಗೋತ್ರಿ ಬಸವೇಶ್ವರ ಸರ್ಕಲ್ ಮಾರ್ಗವಾಗಿ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಸಂಚರಿಸಿತು.

## ಪಹಲ್ಗಾಮ ದಾಳಿ ಖಂಡಿಸಿ ಮುಸ್ಲಿಂ ಬಾಂಧವರಿಂದ ಶ್ರದ್ಧಾಂಜಲಿ



**ಲೋಕಾಪುರ :** ಕಾಶ್ಮೀರದ ಪಹಲ್ಗಾಮನ ಪ್ರವಾಸಿಗರ ಮೇಲೆ ಉಗ್ರ್ರಾಮಿಗಳ ದಾಳಿಯನ್ನು ಸ್ಥಳೀಯ ಅಂಜುಮನ್ ಇಸ್ಲಾಂ ಕಮೀಟಿ ಹಾಗೂ ಮುಸ್ಲಿಂ ಬಾಂಧವರು ಖಂಡಿಸಿದ್ದಾರೆ.

ಪಟ್ಟಣದ ಯಾದವಾಡ ರಸ್ತೆಯಲ್ಲಿರುವ ಚಾಂದತಾರಾ ಮಸೀಜದ ಆವರಣದಲ್ಲಿ ಜುಮ್ಮಾ ನಮಾಜ ನಂತರ ನೂರಾರು ಮುಸ್ಲಿಂ ಬಾಂಧವರು ಮೌನಾಚರಣೆ, ಶ್ರದ್ಧಾಂಜಲಿ ಸಭೆ ನಡೆಸಿ ಮೃತರ ಆತ್ಮಕ್ಕೆ ಶಾಂತಿ ಕೋರಲಾಯಿತು.

ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಉಪಾಧ್ಯಕ್ಷ ರಫೀಕ ಭೈರಕದಾರ ಮಾತನಾಡಿ ಕಾಶ್ಮೀರ ಪಹಲ್ಗಾಮನಲ್ಲಿ ನಡೆದ ಘಟನೆ ನಾಗರಿಕ ಸಮಾಜ ತಲೆ ತಗ್ಗಿಸುವಂತಹದ್ದು, ಈ ಘಟನೆಗೆ ಸಾಕ್ಷಿಯಾದ ಉಗ್ರರನ್ನು ಹತ್ಯೆ ಮಾಡಬೇಕು, ಉಗ್ರವಾದಿಗಳಿಗೆ ಸಾರ್ವಜನಿಕರವಾಗಿ ಕಠಿಣ ಶಿಕ್ಷೆಯಾಗಬೇಕು, ಉಗ್ರಗಾಮಿಗಳ ನ್ನುಬೆಂಬಲಿಸುವಸಂಘಟನೆಗಳಿಗೆ ಮತ್ತು ದೇಶಕ್ಕೆ ತಕ್ಕ ಪಾಠ ಕಲಿಸಬೇಕು, ದುಷ್ಕೃತ್ಯವನ್ನು ಎಸಗಿದ ಉಗ್ರರ ವಿರುದ್ಧ ಪ್ರತಿಕಾರವನ್ನು ತೀರಿಸಬೇಕು ಎಂದು ಕೇಂದ್ರ ಸರಕಾರಕ್ಕೆ ಒತ್ತಾಯಿಸಿದರು. ಸರ್ಕಾರವು ಸಂತ್ರಸ್ತ ಕುಟುಂಬಗಳಿಗೆ ಎಲ್ಲಾ ಪರಿಹಾರ ಮತ್ತು ಸಹಾಯವನ್ನು ನೀಡಬೇಕು, ಮೃತರ ಆತ್ಮಕ್ಕೆ ಶಾಂತಿ ಕೋರುತ್ತಾ ಈ ದಾಳಿಯಲ್ಲಿ ಗಾಯಗೊಂಡವರು ಬೇಗನೆ ಚೇತರಿಸಿಕೊಳ್ಳಬೇಕೆಂದು ಆ ದೇವರಲ್ಲಿ ಪ್ರಾರ್ಥಿಸುತ್ತೇನೆ ಎಂದರು.

ಅಂಜುಮನ್–ಎ–ಇಸ್ಲಾಂ ಕಮೀಟಿ ಅಧ್ಯಕ್ಷ ಹಸನಡೋಂಗ್ರಿ ಮಹಾಲಿಂಗಪೂರ ಮಾತನಾಡಿ ಈ ಘಟನೆ ನಮ್ಮ ರಾಷ್ಟ್ರದ ಐಕ್ಯತೆ ಮತ್ತು ಸಮಗ್ರತೆಯ ಮೇಲೆ ದಾಳಿಯಾಗಿದೆ, ದೇಶದಲ್ಲಿ ಶಾಂತಿಗೆ ಭಂಗ ತರುವ ಕೆಲಸ ಮಾಡುವ ಭಯೋತ್ಪಾಕರನ್ನು ಬೇರುಸಮೇತಕಿತ್ತುಎಸೆಯಬೇಕು, ದೇಶದ ಪ್ರಧಾನಿ ಮೋದಿಯವರು ಉಗ್ರಗಾಮಿಗಳ ನೆಲೆಯನ್ನು ಹುಡುಕಿ ದೇಶದ್ರೋಹಿಗಳನ್ನು ಸಂಪೂರ್ಣವಾಗಿ ನಿರ್ನಾಮ ಮಾಡಲು ಕೇಂದ್ರ ಸರಕಾರ ಕ್ರಮ ಕೈಗೊಳ್ಳಬೇಕು ಎಂದರು.

ಶ್ರದ್ಧಾಂಜಲಿ ಸಭೆಯಲ್ಲಿ ಅಂಜುಮನ್ ಇಸ್ಲಾಂ ಕಮೀಟಿ ಉಪಾಧ್ಯಕ್ಷ ಸೈಯದ ನಧಾಪ, ಕಾರ್ಯದರ್ಶಿ ಶಾಧೀಕಖಾನ ಪಠಾಣ, ಖಜಾಂಜಿ ರಫೀಕ ಗುಳೇದಗುಡ್ಡ, ಎಸ್‌ಡಿಎಂಸಿ ಅಧ್ಯಕ್ಷ ಶಬ್ಬೀರ ಅತ್ತಾರ, ಅಂಜುಮನ್ ಸದಸ್ಯರಾದ ಸೈಯದ ಚಿತ್ರಭಾನುಕೋಟಿ, ಸೈಯದ ನಧಾಪ, ಶಬ್ಬೀರ ಚೌಧರಿ, ಅಬ್ದುಲ್ ರಹೆಮಾನ ತೊರಗಲ್, ಸೈಯದ ಗುದಗಿ, ರಿಯಾಜ ಮಕನದಾರ, ನಜೀರ ತೊರಗಲ್, ಕುತುಬುದ್ದೀನ ಅತ್ತಾರ, ಅಬ್ದುಲ್ ರಜಾಕ ಮುಲ್ಲಾ, ನಬೀ ಇಂಗಳಗಿ, ಜಾವೇದ ಮುಧೋಳ, ಸುಲ್ತಾನ ಕಲಾದಗಿ, ಮೌಲಾನ ಆಬಿಲ್ ನಧಾಪ, ಹಸನ ಡಂಗಿ, ಅಲ್ಲಾಭಕ್ಷ ನಾಲಬಂದ ಚಾಂದತಾರಾ ಮಸಜೀದ ಕಮೀಟಿ ಅಧ್ಯಕ್ಷ ಮೈಬೂಬ ರಾಮದುರ್ಗ ನೂರಾರು ಮುಸ್ಲಿಂ ಬಾಂಧವರು ಇದ್ದರು.

## ಪ್ರತಿಯೊಬ್ಬರು ತಮ್ಮ ಮನೆಯ ಸುತ್ತಮುತ್ತ ಸ್ವಚ್ಛತೆ ಕಾಪಾಡಿ ರೋಗಗಳಿಂದ ದೂರವಿರಲು ಸಾಧ್ಯ: ಟಿಎಚ್‌ಓ ಪ್ರದೀಪ್



**ಕೂಡ್ಲಿಗಿ :** ಪ್ರತಿಯೊಬ್ಬರೂ ತಮ್ಮ ಮನೆಯ ಸುತ್ತ, ಮುತ್ತ ಕೊಳಚೆ ನೀರು ನಿಂತುಕೊಳ್ಳದಂತೆ ಜಾಗೃತಿವಹಿಸುವುದು, ಸೊಳ್ಳೆ ಉತ್ಪತ್ತಿಯಾಗದಂತೆ ನಿಗಾವಹಿಸುವುದು ಹಾಗೂ ಸೊಳ್ಳೆ ಕಡಿತಕ್ಕೆ ಒಳಗಾಗದಂತೆ ರಕ್ಷಣೆ ಮಾಡಿಕೊಳ್ಳುವುದರಿಂದ ಮಲೇರಿಯಾ ತಡೆಗಟ್ಟಬಹುದು ಎಂದು ಟಿಎಚ್‌ಓ ಡಾ.ಎಸ್.ಪಿ.ಪ್ರದೀಪ್ ಕುಮಾರ್ ಹೇಳಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಶುಕ್ರವಾರ ವಿಶ್ವ ಮಲೇರಿಯಾ ದಿನಾಚರಣೆ ಜಾಗೃತಿ ಜಾಥಕ್ಕೆ ಚಾಲನೆ ನೀಡಿ ಮಾತನಾಡಿದರು.

ಸಾಂಕ್ರಾಮಿಕ ಕಾಯಿಲೆಗಳಲ್ಲಿ ಮಲೇರಿಯಾ ಒಂದು. ಸಾಂಕ್ರಾಮಿಕಕಾಯಿಲೆಗಳುಸೊಳ್ಳೆಗಳಿಂದಹರಡುತ್ತವೆ. ಅನಾಫಿಲಸ್ ಜಾತಿಗೆ ಸೇರಿದ ಹೆಣ್ಣು ಸೊಳ್ಳೆಗಳಿಂದ ಮಲೇರಿಯಾ ಸಾಂಕ್ರಾಮಿಕ ಕಾಯಿಲೆ ಬರುತ್ತದೆ.

ಮಲೇರಿಯಾ ಕಾಯಿಲೆಯ ಬಗ್ಗೆ ಜನರಿಗೆ ಅರಿವು ಮೂಡಿಸುವ ಉದ್ದೇಶದಿಂದ ಆರೋಗ್ಯ ಇಲಾಖೆ ವಿಶ್ವ ಮಲೇರಿಯಾ ದಿನಾಚರಣೆಯನ್ನು ಆಚರಿಸುವ ಮೂಲಕ ಜನರಿಗೆ ಅರಿವು ಮೂಡಿಸುವ ಕಾರ್ಯವನ್ನು ಮಾಡುತ್ತಿದೆ ಎಂದರು.

ಹರಿಯದೆ ನಿಂತುಕೊಳ್ಳುವ ಕೊಳಚೆ ನೀರು, ಮನೆಯ ಸುತ್ತಮುತ್ತಲಿನ ಪರಿಸರ ಸ್ವಚ್ಚತೆ ಇಲ್ಲದ ಸ್ಥಳಗಳಲ್ಲಿ ಮಲೇರಿಯಾ ಹರಡುವ ಸೊಳ್ಳೆಗಳು ಉತ್ಪಪತ್ತಿಯಾಗುತ್ತವೆ. ಸೊಳ್ಳೆ ಒಬ್ಬನಿಂದ ಮತ್ತೊಬ್ಬನಿಗೆ ಕಡಿಯುವ ಮೂಲಕ ಮಲೇರಿಯಾ ಸಾಂಕ್ರಾಮಿಕ ಕಾಯಿಲೆ ಬರುತ್ತದೆ. ಇಂತಹ ಸಂದರ್ಭದಲ್ಲಿ ವ್ಯಕ್ತಿಗೆ ಚಳಿ–ಜ್ವರ ಬರುವ ಲಕ್ಷಣ ಕಾಣಿಸಿಕೊಳ್ಳುತ್ತದೆ. ಕೂಡಲೇ ಹತ್ತಿರದಲ್ಲಿರುವ ಆಸ್ಪತ್ರೆಗೆ ಹೋಗಿ ವೈದ್ಯರಿಂದ ರಕ್ತ ಪರೀಕ್ಷೆ ಮಾಡಿಸಿಕೊಳ್ಳುವುದರ ಜತೆಯಲ್ಲಿ ಅವರ ಸೂಚನೆಯಂತೆ ಚಿಕಿತ್ಸೆ ಗೆ ಒಳಗಾಗಬೇಕು ಎಂದು ಸಲಹೆ ನೀಡಿದರು.

ನಂತರ ಪಟ್ಟಣದ ರಾಘವೇಂದ್ರ ಪ್ಯಾರಮೆಡಿಕಲ್ ವಿಧ್ಯಾರ್ಥಿಗಳು ಮಲೇರಿಯಾ ಕುರಿತು ಜಾಗೃತಿ ಜಾಥವನ್ನು ಪಟ್ಟಣದ ವಿವಿಧ ರಸ್ತೆಗಳ ಮೂಲಕ ಸಂಚರಿಸಿ ಭಿತ್ತಿಚಿತ್ರಗಳ ಮೂಲಕ ಜಾಗೃತಿ ಮೂಡಿಸಿದರು.

ಈ ಸಂಧರ್ಭದಲ್ಲಿ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಕೆ. ಜಗದೀಶ್, ವಾಹಾಬ್,ಗುರುಮೂರ್ತಿ, ಕಿರಿಯಾ ಆರೋಗ್ಯ ನಿರೀಕ್ಷೀಣಾಧಿಕಾರಿ ಕೆ.ಸುನೀತಾ, ಮಹೇಶ್, ಮಲೇರಿಯಾ ಮೇಲ್ವಿಚಾರಕ ಕೊಟ್ರೇಶ್, ಆರ್ ಕೆಎಸ್ ಕೆ ಆಪ್ತ ಸಮಾಲೋಚಕ ಓಬಣ್ಣ, ಆರೋಗ್ಯ ನಿರೀಕ್ಷಿಣಾಧಿಕಾರಿ ಮಹೇಶ್,ಕಿರಿಯಾ ಆರೋಗ್ಯ ಸುರಕ್ಷಾತಾಧಿಕಾರಿಗಳಾದ ಲಕ್ಷ್ಮಿ, ಶೃತಿ, ಶೀಲಾ, ದಿವ್ಯಾ,ಮಾಲಾ ಸೇರಿದಂತೆ ಅನೇಕರು ಇದ್ದರು.

ವರದಿ ಎಚ್ ವೀರಣ್ಣ

## ಉಗ್ರರ ಪಾಲ್ಗಹಾಮ್ ಕೃತ್ಯ ಖಂಡನೀಯ: ಹುಮಯೂನ್ ಖಾನ್

**ಬಳ್ಳಾರಿ :** ಜಮ್ಮು ಕಾಶ್ಮೀರದ ಪಹಲ್ಗಾಮ್ ನಲ್ಲಿ ಹಿಂದೂಗಳ ಮೇಲೆ ಉಗ್ರರು ನಡೆಸಿದ ದಾಳಿಯನ್ನು ನಗರದ ಮುಸ್ಲಿಂ ಸಂಘಟನೆಗಳ ಮುಖಂಡರು ಖಂಡಿಸಿದ್ದಾರೆ. ಬಳ್ಳಾರಿ ಮುಸ್ಲಿಂ ಸಂಘಟನೆಗಳ ಒಕ್ಕೂಟದ ಪದಾಧಿಕಾರಿಗಳು, ಯುವಕರು, ವಿವಿಧ ಮುಖಂಡರು ನಗರದ ಡಿಸಿ ಕಚೇರಿಯಲ್ಲಿ ಜಮಾಯಿಸಿ, ಉಗ್ರವಾದಿ ವಿರೋಧಿ ಘೋಷಣೆಗಳನ್ನು ಕೂಗಿ ಭಯೋತ್ಪಾದಕ ದಾಳಿಯನ್ನು ಖಂಡಿಸಿ, ಜಿಲ್ಲಾಧಿಕಾರಿಗಳ ಮೂಲಕ ರಾಷ್ಟ್ರಪತಿ ಅವರಿಗೆ ಮನವಿ ಪತ್ರವನ್ನು ಸಲ್ಲಿಸಿದರು.

ಬುಡಾ ಮಾಜಿ ಅಧ್ಯಕ್ಷ ಹಾಗೂ ವಕ್ಫ್ ಬೋರ್ಡ್ ಅಧ್ಯಕ್ಷ ಹುಮಾಯೂನ್ ಖಾನ್ ಅವರು ಮಾತನಾಡಿ, ಜಮ್ಮು ಕಾಶ್ಮೀರದ ಪ್ರವಾಸಿ ತಾಣ ಪಹಲ್ಗಾಮ್ ನಲ್ಲಿ ಉಗ್ರರು ಅಮಾಯಕರಮೇಲೆಗುಂಡಿನದಾಳಿನಡೆಸಿದ್ದು,ಇದುಅತ್ಯಂತ ಖಂಡನೀಯ. ರಾಜ್ಯ ಸೇರಿದಂತೆ ದೇಶದ ನಾನಾ ಕಡೆಯ




ಸುಮಾರು26ಕ್ಕೂಹೆಚ್ಚುಅಮಾಯಕಜನರುಹತ್ಯೆಯಾಗಿದ್ದು, ಅವರ ಕುಟುಂಬ ಅನಾಥವಾಗಿದೆ. ಘಟನೆಯಲ್ಲಿ ಸುಮಾರು ಜನರು ಗಂಭೀರ ಗಾಯಗೊಂಡಿದ್ದಾರೆ, ಉಗ್ರರ ಈ ಕ್ರೌರ್ಯ ಅತ್ಯಂತ ಖಂಡನೀಯವಾಗಿದ್ದು, ತಪ್ಪು ಯಾರೇ ಮಾಡಿರಲಿ ಕಠಿಣ ಶಿಕ್ಷೆಯಾಗಲೇಬೇಕು, ಮತ್ತೆ ಇಂತಹ ಘಟನೆಗಳು ಮರುಕಳಿಸದಂತೆ ಸರ್ಕಾರ ಅಗತ್ಯ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಉಗ್ರರ ದಾಳಿಯಲ್ಲಿ ಮೃತಪಟ್ಟ ಎಲ್ಲರ ಆತ್ಮಕ್ಕೆ ದೇವರು ಶಾಂತಿ, ನೆಮ್ಮದಿಯನ್ನು ನೀಡಲಿ ಎಂದು ಪ್ರಾರ್ಥಿಸುವೆ.

ಉಗ್ರರ ಈ ದಾಳಿಯಿಂದ ಇಡಿ ದೇಶವೇ ಶೋಕದಲ್ಲಿ ಮೊಳಗಿದೆ. ಘಟನೆಯಲ್ಲಿ ಗಾಯಗೊಂಡವರು ಬೇಗ ಗುಣಮುಖರಾಗಲಿ ಎಂದು ಪ್ರಾರ್ಥಿಸುವೆ ಎಂದರು.

ದಾಳಿಯ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಿ ಕಠಿಣ ಶಿಕ್ಷೆಗೆ ಒಳಪಡಿಸಬೇಕು. ಸಂತ್ರಸ್ತ ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡಬೇಕು, ಪರಿಹಾರ ಕ್ರಮಗಳನ್ನು ವಿಸ್ತರಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಮುಸ್ಲಿಂ ಧರ್ಮ ಗುರುಗಳಾದ ಖಾಜಿ ಮೊಹಿನುದ್ದೀನ್, ಸಿದ್ದಿಕಿ, ಮುಖಂಡರಾದ ಆಯಾಜ್ ಅಹ್ಮದ್,ಹುಸೇನ್ ಪೀರ್,ಆಲಂ ಪಾಷ,ಆಸೀಫ್,ಕಣೇಕಲ್ ಮಾಬುಸಾಬ್, ಸರ್ಫ್ ರಾಜ್, ಸಮೀರ್ ಸೇರಿದಂತೆ ಸುಮಾರು ಯುವಕರು, ಮುಖಂಡರು ಭಾಗವಹಿಸಿದ್ದರು.

## ನೆಹರು ಯುವ ಕೇಂದ್ರದ ಜಿಲ್ಲಾ ಯುವ ಅಧಿಕಾರಿ ಮೊಂಟು ಪತ್ತಾರ್ ಜಾರ್ಖಂಡ್ ರಾಜ್ಯಕ್ಕೆ ವರ್ಗಾವಣೆ

**ಬಳ್ಳಾರಿ :** ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿರುವ ನೆಹರು ಯುವ ಕೇಂದ್ರದ ಜಿಲ್ಲಾ ಯುವ ಅಧಿಕಾರಿ ಜಾರ್ಖಂಡ್ ರಾಜ್ಯದ ಜೇಮ್ ಶೆಡ್ ಪುರ್ ಜಿಲ್ಲೆಗೆ ವರ್ಗಾವಣೆಗೊಂಡಿದ್ದಾರೆ.

ಅವರು ಇಂದು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿರುವ ನೆಹರು ಯುವ ಕೇಂದ್ರದ ಕಚೇರಿಯಲ್ಲಿ ಇಂದು ನಡೆದ ಬೀಳ್ಕೊಡುಗೆ ಸಮಾರಂಭದಲ್ಲಿ ಮೊಂಟು ಪತ್ತಾರ್ ಅವರು ಗದಗ್ ಜಿಲ್ಲೆಯಿಂದ ಬಳ್ಳಾರಿಗೆ ವರ್ಗಾವಣೆಗೊಂಡ ರಂಜನಿ ಅವರಿಗೆ ಅಧಿಕಾರವನ್ನು ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮೊಂಟು ಪತ್ತಾರ್, ಕಳೆದ ನಾಲ್ಕೈದು ವರ್ಷಗಳಿಂದ ನಾನು ಬಳ್ಳಾರಿಯ ನೆಹರು ಯುವ ಕೇಂದ್ರದಲ್ಲಿ ಜಿಲ್ಲಾ ಯುವ ಅಧಿಕಾರಿಯಾಗಿ ಕೆಲಸ ಮಾಡಿರುತ್ತೇನೆ ನನಗೆ ನಮ್ಮ ಕಚೇರಿಯ ಎಲ್ಲಾ ಸಿಬ್ಬಂದಿಗಳು ಮತ್ತು ವಿಶೇಷವಾಗಿ ಜಿಲ್ಲಾಡಳಿತ , ಜಿಲ್ಲಾ ಪಂಚಾಯತ್ ವಾರ್ತಾ ಇಲಾಖೆ ಮತ್ತು ಸಹಾಯಕ ಅಧಿಕಾರಿಗಳು ಅತ್ಯಂತ ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹವನ್ನು ಮತ್ತು ಸಹಕಾರವನ್ನು ನೀಡಿದ್ದಾರೆ ಅವರ ಮಾರ್ಗದರ್ಶನದಲ್ಲಿ ಜಿಲ್ಲೆಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗಿರುತ್ತೇನೆ ಮತ್ತು ಅತ್ಯಂತ ಮುಖ್ಯವಾಗಿ ಹಂಪಿ ಉತ್ಸವ ಜಿ ಟ್ವೆಂಟಿ ಮತ್ತು ಮಾನವ ಸರ್ಪಳಿ ಎಂಬ ರಾಜ್ಯಮಟ್ಟದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಕಾರ್ಯಕ್ರಮದ ಯಶಸ್ವಿಗಾಗಿ ನಮ್ಮ ಸೇವೆಯನ್ನು ಸಲ್ಲಿಸಿರುತ್ತೇನೆ ನನಗೆ ಅತ್ಯಂತ ಹೆಚ್ಚಿನ ರೀತಿಯಲ್ಲಿ ಸಹಕಾರ ನೀಡಿದ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರ ಅವರಿಗೆ ನಾನು ಧನ್ಯವಾದಗಳನ್ನು ತಿಳಿಸುತ್ತೇನೆ ಎಂದರು.

“SIHI KAHI” Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State